ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 16 ಏಪ್ರಿಲ್ 20, 1980 40 ಪೈಸೆ

ವಿದ್ಯುತ್ ಬಂದ್ ಯಾಕೆ?

ತಾ. 15 ಮಧ್ಯ ರಾತ್ರಿಯಿಂದ ಹೈಟೆನ್ಷನ್ ವಿದ್ಯುತ್ ಉಪಯೋಗಿಸುವ ಸುಮಾರು ರಾಜ್ಯದ 1200 ಕೈಗಾರಿಕಾ ಘಟಕಗಳಿಗೆ ಪೂರ್ಣವಾಗಿ ನಿಲ್ಲಿಸಲಾಗಿದ್ದ ವಿದ್ಯುಚ್ಛಕ್ತಿ ಪೂರೈಕೆಯನ್ನು ಪುನರಾರಂಭಿಸಲು ಸರಕಾರ ತೀರ್ಮಾನಿಸಿದೆ. ವಿದ್ಯುತ್ ಪೂರೈಕೆಯನ್ನು ನಿಲ್ಲಿಸಿದ್ದಾದರೂ ಯಾಕೆ ಮತ್ತೀಗ ಅದನ್ನೊದಗಿಸಲು ತೀರ್ಮಾನ ತೆಗೆದುಕೊಂಡಿರುವುದಾದರೂ ಯಾಕೆಂಬುದರ ಬಗ್ಗೆ ಸವಿಸ್ತಾರವಾದ ವಿವರಣೆಯನ್ನು ಸರಕಾರ ಕೊಡುವುದಗತ್ಯ.

ವಿದ್ಯುತ್ ಪೂರೈಕೆಯನ್ನು ಏಕಾಏಕಿಯಾಗಿ ನಿಲ್ಲಿಸಿದ್ದನ್ನು ಖಂಡಿಸಲೇಬೇಕಾಗಿದೆ. ಈ ಕ್ರಮ "ರಾಜಕೀಯ ಮುಖಂಡತ್ವ ಹಾಗೂ ಆಡಳಿತದಲ್ಲಿ ವಿವೇಕದ ದಿವಾಳಿಕೋರತನವನ್ನು ತೋರಿಸುತ್ತದೆ"ಂಬ ದೇವರಾಜ್ ಅರಸುರವರ ಟೀಕೆಯು ಸಮಂಜಸವಾದುದಾಗಿದೆ ಮಾನ್ಯ ಮುಖ್ಯಮಂತ್ರಿ ಶ್ರೀ ಗುಂಡೂರಾಯರ ಈ ಕ್ರಮವು ಮಹಮ್ಮದ್ ಬಿನ್ ತುಗ್ಲಕ್‌ನ ಆಡಳಿತಗೆ ಹೋಲುವಂತಾಗಿದೆ ಮೊದಲ ನಿರ್ಣಯದಂತೆ ವಿದ್ಯುಚ್ಛಕ್ತಿ ಪೂರೈಕೆಯನ್ನು ನಿಲ್ಲಿಸಿದ್ದರೆ ಸುಮಾರು 3 ಲಕ್ಷ ಕೆಲಸಗಾರರು ನಿರುದ್ಯೋಗಿಗಳಾಗುತ್ತಿರುತ್ತಿದ್ದರು. ಸುಮಾರು 1200 ಕೈಗಾರಿಕೆಗಳೂ, ಅವುಗಳನ್ನು ಅವಲಂ


ಸಂಪಾದಕೀಯ

ಬಿಸಿರುವ ಸಹಸ್ರಾರು ಸಣ್ಣ ಕೈಗಾರಿಕೆಗಳೂ ಸ್ತಂಬನಗೊಂಡು, ಬಟ್ಟೆ, ಸಿಮೆಂಟ್ ಮುಂತಾದ ಸಾಮಗ್ರಿಗಳ ಉತ್ಪಾದನೆ ನಿಂತುಹೋಗಿ ಸಾಮಗ್ರಿಗಳ ಬೆಲೆಗಳು ಏರುತ್ತಿದ್ದುವು. ರಾಜ್ಯದ ಆರ್ಥಿಕ ವ್ಯವಸ್ಥೆಯು ಅಸ್ತವ್ಯಸ್ತವಾಗುತ್ತಿತ್ತು.

ಸದ್ಯಕ್ಕೆ ಈ ಅಪಾಯ ನಿಂತಂತಾಗಿದೆ. ಆದರೆ ಈ ಪರಿಸ್ಥಿತಿಗೆ ಕಾರಣವೇನೆಂಬುದನ್ನು ಆಳವಾಗಿ ಅಭ್ಯಾಸಮಾಡಿ ಮುಂದೆ ಇದು ತಲೆದೋರದಂತೆ ಮಾಡುವುದಗತ್ಯ.

ನಮ್ಮ ರಾಜ್ಯವು ಜಲವಿದ್ಯುತ್ ಯೋಜನೆಯನ್ನೇ ಮುಖ್ಯವಾಗಿ ಅವಲಂಬಿಸಿದೆ. ಈ ಕ್ಷೇತ್ರದಲ್ಲಿ ಮಾಜಿ ಮೈಸೂರು ಅಗ್ರಸ್ಥಾನವನ್ನು ಪಡೆದಿತ್ತು. ಶರಾವತಿ ಯೋಜನೆಯು ನಮ್ಮ ರಾಜ್ಯದ ಕೈಗಾರಿಕಾಭಿವೃದ್ಧಿಗೆ ಜೀವಾಳವಾಗಿತ್ತು. ನಂತರ ಕಾಳಿನದಿ ಯೋಜನೆಯನ್ನು ಕೈಗೊಳ್ಳಲಾಯಿತು. ಇದು ಏಷಿಯಾ ಖಂಡದಲ್ಲೇ ಹಿರಿದಾದ ಯೋಜನೆ. ಇದರ ಕೆಲಸವು ಕುಂಟುತ್ತಾ ನಡೆದು ಈಗ ಪ್ರಥಮ ಹಂತವು ಮುಗಿದಿದೆ.

(ಕಡೆಯ ಪುಟ ನೋಡಿ)



ವ್ಲಾದಿಮೀರ್ ಇಲ್ಯಾನೋವಿಚ್ ಲೆನಿನ್
(ಏಪ್ರಿಲ್ 22, 110ನೇ ಹುಟ್ಟು ಹಬ್ಬ)

ಕ್ರಾಂತಿ!

ಅಂದು : 1887ರ ಡಿಸಂಬರಿನ
ನಾಲ್ಕನೇ ತಾರೀಖಿನ ದಿನ :
ಕಜಾನ ನಗರದ ಯುವ-ವಿದ್ಯಾರ್ಥಿಗಳು
ಬಣವೆ ಸಾಲಿಗೆ ಬೆಂಕಿ ಹತ್ತಿದಂತೆ
ಧಗ್ಗನೆ ಉರಿದೆದ್ದಿದ್ದರು;
ಝಾರನ ವಿರುದ್ಧ ಸಿಡಿದೆದ್ದಿದ್ದರು,
ಬೀದಿ ಬೀದಿಗಳಲ್ಲಿ ಏರುಕಂಠಗಳಿಂದ
ಧಿಃಕ್ಕಾರ! ಧಿಃಕ್ಕಾರ! ಕೂಗಿದ್ದರು,
ನಗರವನ್ನೇ ನಡುಗಿಸಿದ್ದರು

ಶಾಂತಿ ಪಾಲನೆಗೆ 'ಚಾಣಾಕ್ಷರ'
ಆಗಮನ
ಲಾಠಿ-ಗುಂಡುಗಳಿಂದ ಉತ್ತರ,
ಕ್ರಮದಂತೆ ಹಲವರ ಬಂಧನ,
ಯಥಾ ಪ್ರಕಾರ ಅಜ್ಞಾನಿ
ಪೋಲೀಸನೊಬ್ಬ
ಹದಿನೇಳರ ಕೈದಿಗೆ ಕೇಳಿದ:
"ಲೇ ಹುಡುಗಾ, ಈ ಒಣಾಉಸಾಬರಿ
ನಿನಗ್ಯಾಕೆ?
ತ್ರಾಸ ವೈಪ್ಯಾಗ ಹಾಕ್ಕೊಂಡು
ಗ್ವಾಡೀಗೆ ಹಾಯೂದು ಯಾಕೆ?"

(ಕಡೆಯ ಪುಟ ನೋಡಿ)

ಅಸ್ಸಾಂ ಸಮಸ್ಯೆ ಹಾಗೂ ಯುವಜನರ ಜವಾಬ್ದಾರಿ

"ವಿದೇಶಿ ನಾಗರಿಕ"ರ ಪ್ರಶ್ನೆಯ ಹೆಸರಿನಲ್ಲಿ ಕೆಲವು ದಿನಗಳಿಂದ ಅಸ್ಸಾಂನಲ್ಲಿ ನಡೆಯುತ್ತಿರುವ ಚಳುವಳಿಯ ಬಗ್ಗೆ ದಿನ ನಿತ್ಯವೂ ಪತ್ರಿಕೆಗಳಲ್ಲಿ ಸುದ್ದಿಗಳು ಪ್ರಕಟವಾಗುತ್ತಿವೆ. ನೂರಾರು ಜನರ ಪ್ರಾಣವನ್ನು ತೆಗೆದುಕೊಂಡು, ಸಾವಿರಾರು ಜನರನ್ನು ದಿಕ್ಕಿಲ್ಲದಂತೆ ಮಾಡಿರುವ ಈ ಚಳುವಳಿ ತಲೆ, ತಲಾಂತರದಿಂದ ಸೌಹಾರ್ದತೆಯಿಂದ ಬದುಕುತ್ತಿದ್ದ ವಿಭಿನ್ನ ಧರ್ಮದವರನ್ನು ಪರಸ್ಪರ ಸಂಶಯದಿಂದ ನೋಡುವಂತೆ ಮಾಡಿದೆ.

ಜನವರಿ 4 ರಿಂದ 10ರವರೆಗೆ ಜನಭರಿತ ಉತ್ತರ ಕಾಮರೂಪ್ ಜಿಲ್ಲೆಯಲ್ಲಿ ಚಳುವಳಿಗಾರರ ಗುಂಪು ಹಳ್ಳಿಯಿಂದ ಹಳ್ಳಿಗೆ ನುಗ್ಗಿ ನಿಸ್ಸಹಾಯಕ ಪ.ಹಿಳೆಯರು, ಮಕ್ಕಳು ಹಾಗೂ ಜನಸಾಮಾನ್ಯರನ್ನು ನಿರ್ದಯವಾಗಿ ಕೊಂದಿರಿಸಿದೆ. ಮನೆಗಳನ್ನು ಲೂಟಿ ಮಾಡಲಾಗಿದೆ. ಆದರೂ ವಾಜಪೇಯಿಯವರಂಥ ವ್ಯಕ್ತಿಗಳು ಚಳುವಳಿಯನ್ನು "ಒಟ್ಟಾರೆ ಶಾಂತಿಯುತ ಹಾಗೂ ಪ್ರಜಾಸತ್ತಾತ್ಮಕ" ಎಂದು ಕರೆದಿದ್ದಾರೆ.

ಕಳೆದ ಕೆಲವು ದಶಕಗಳಲ್ಲಿ ಅಸ್ಸಾಂನ ಜನಸಂಖ್ಯೆ ವಿಪರೀತ ಏರಿದೆ ಎಂಬುದು ನಿಜ. ಇದರಲ್ಲಿ ನೇಪಾಳ ಮತ್ತು ಬಾಂಗ್ಲಾದೇಶ (ಹಿಂದಿನ ಪಾಕಿಸ್ತಾನ) ದಿಂದ ಸತತವಾಗಿ ಬರುತ್ತಿರುವ ಸಂಜಾತರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಇವರಲ್ಲಿ ವಿಭಜನೆಯಾದಾಗ ಬಂದವರೆಷ್ಟು, ನಂತರ ಬಂದವರೆಷ್ಟು, ಸಹಜ ಜನಸಂಖ್ಯಾ ಸ್ಫೋಟನೆಯಿಂದ ಹೆಚ್ಚಾದದ್ದೆಷ್ಟು ಎಂಬುದನ್ನು ಇನ್ನೂ ನಿರ್ಧರಿಸಬೇಕಾಗಿದೆ.

ವಿಶಾಲ ಹಚ್ಚ ಹಸಿರು ಟೀ ತೋಟಗಳನ್ನು ಇನ್ನೂ ತಮ್ಮ ಕೈಯಲ್ಲಿಯೇ ಉಳಿಸಿಕೊಂಡಿರುವ ಬ್ರಿಟಿಷರು ಸಾವಿರಾರು ತೋಟ ಕಾರ್ಮಿಕರನ್ನು ವಲಸೆ ಮೂಲಕ ಭಾರತಕ್ಕೆ ತಂದರು. ಅಸ್ಸಾಮಿಗಳೂ ಸಹಾ ತಮ್ಮ ಸೆಣಬು ಮತ್ತು ಬತ್ತ ಬೆಳೆಯುವ ವಿಶಾಲ ಪ್ರದೇಶಗಳಲ್ಲಿ ಕೂಲಿಮಾಡಲು ಗಡಿಪ್ರದೇಶದಿಂದ ಮುಸ್ಲಿಮರನ್ನು ಕರೆತಂದರು. ಎಡ ಪಕ್ಷಗಳ ಪ್ರಭಾವವನ್ನು ತಡೆಗಟ್ಟಲು 30 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಗಣನೀಯ ಸಂಖ್ಯೆಯಲ್ಲಿ ಮುಸ್ಲಿಮರಿದ್ದ ಪ್ರದೇಶಕ್ಕೆ ಮತ್ತಷ್ಟು ಮುಸ್ಲಿಂ ವಲಸೆಗಾರರನ್ನು ತುಂಬಿ ತಾವು ಅಧಿಕಾರಕ್ಕೆ ಅಂಟಿಕೊಳ್ಳುವುದನ್ನು ಮಾತ್ರ ನೋಡಿಕೊಂಡರು.

ಬಂಡವಾಳಶಾಹಿ ಸಮಾಜದ ಅಸಮಾನ ಬೆಳವಣಿಗೆ ಅಸ್ಸಾಂನಲ್ಲೂ ಕಳೆದೆರಡು ದಶಕಗಳಲ್ಲಿ ತಲೆದೋರಿದೆ. ಕೃಷಿ, ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಅಸ್ಸಾಂ ಸಂಪೂರ್ಣ ಹಿಂದುಳಿದಿದೆ. ನಿರುದ್ಯೋಗ ಬೃಹದಾಕಾರವಾದಿದ್ದು, ಶೇಕಡ 77 ರಷ್ಟು ಕೃಷಿಕರು ಭೂಹೀನರಾಗಿದ್ದಾರೆ ಇಲ್ಲವೇ ನಿರುಪಯುಕ್ತ ಭೂಮಿಯ ಮಾಲಕರಾಗಿದ್ದಾರೆ. ಕೇಂದ್ರದ ನೀತಿಯಿಂದ ಬೇಸತ್ತ ಅಸ್ಸಾಂ ಜನತೆ ಕಳೆದ ಬಾರಿ ವಿಧಾನ ಸಭೆಗೆ ನಡೆದ ಚುನಾವಣೆಗಳಲ್ಲಿ ಎಡ ಪಕ್ಷಗಳ ಅಭ್ಯರ್ಥಿಗಳಿಗೆ ಹಿಂದೆಂದಿಗಿಂತಲೂ ಹೆಚ್ಚಾಗಿ ಮತವಿತ್ತರು. ಆದ್ದರಿಂದಲೇ ಸಹಜವಾಗಿ ಆಳುವ ವರ್ಗಗಳು ಸಂಕುಚಿತ, ಛಿದ್ರಕಾರಕ ಶಕ್ತಿಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ವರ್ಗ ಸಂಘಟನೆಗಳನ್ನು ಮುರಿಯಲು ಪ್ರಾರಂಭಿಸಿದರು.

ಅಸ್ಸಾಂ ಸಾಹಿತ್ಯಸಭಾ ಹಾಗೂ ಪ್ರತಿಗಾಮೀ ಶಕ್ತಿಗಳ ಕೈಗೊಂಬೆ ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್‌ಗಳು ಪತ್ರಿಕೆಗಳಲ್ಲಿ ಹೇಳಿಕೆ, ಲೇಖನಗಳಿಂದ ಪ್ರಾರಂಭಿಸಿ ಸಾಮೂಹಿಕ ಸತ್ಯಾಗ್ರಹಕ್ಕೆ ಕರೆಕೊಟ್ಟವು. ಮಧ್ಯಮ ವರ್ಗ ಸಕ್ರಿಯವಾಗಿ ಭಾಗವಹಿಸಲು ಪ್ರಾರಂಭವಾದನಂತರ ಎಡಪಕ್ಷಗಳನ್ನುಳಿದ ಇತರ ರಾಜಕೀಯ ಪಕ್ಷಗಳು, ಆಲ್ ಅಸ್ಸಾಮ್ ಸ್ಟೂಡೆಂಟ್ಸ್ ಯೂನಿಯನ್ ಮುಂತಾದ ಸಂಘಟನೆಗಳಿಂದ ಕೂಡಿದ "ಗಣಸಂಗ್ರಾಮ ಪರಿಷತ್" ನಾಯಕತ್ವದಲ್ಲಿ ಚಳುವಳಿ ತೀವ್ರವಾಯಿತು.

ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವ ಬದಲು ರಾಜ್ಯದ ಆಡಳಿತಾಂಗ, ಪೋಲೀಸ್‌ಪಡೆ ಸಂಪೂರ್ಣವಾಗಿ ಚಳುವಳಿಗಾರರಿಗೆ ಸಹಕಾರ ನೀಡುತ್ತಿದೆ. ಮಾರವಾಡಿ ವ್ಯಾಪಾರಸ್ಥರ ಧಾರಾಳ ಸಹಾಯವೂ ಇದೆ ಇದೇ ಸಮಯದಲ್ಲಿ ತನ್ನ ಸ್ವಾರ್ಥ ಸಾಧಿಸಲು ಫ್ಯಾಸಿಸ್ಟ್ ಆರೆಸ್ಸೆಸ್ ಮಾತೀಯ ಗಲಭೆಗಳನ್ನು ಉಂಟು ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಯುವ ಜನಾಂಗವನ್ನು ದಾರಿತಪ್ಪಿಸುವ ಆರೆಸ್ಸೆಸ್‌ನ ನೀತಿಗೆ ವ್ಯಾಪಕ ಪ್ರಚಾರ ಸಿಗುತ್ತಿದೆ.

(ಕಡೆಯ ಪುಟ ನೋಡಿ)

ರೇಷ್ಮೆ ಕೈಗಾರಿಕೆಯಲ್ಲಿ ಶ್ರಮ ಜೀವಿಗಳು

ಎಂ. ಎನ್. ಉಗ್ರಪ್ಪ, ಮೈಸೂರು

ರೇಷ್ಮೆ ಕೈಗಾರಿಕೆ, ವ್ಯವಸಾಯ ಆಧಾರಿತವಾದದ್ದು. ಈ ಕೈಗಾರಿಕೆ ಹಿಪ್ಪನೇರಳೆ ಬೆಳೆ, ರೇಷ್ಮೆ ಹುಳು ಸಾಕಾಣಿಕೆ, ರೇಷ್ಮೆಗೂಡಿನಿಂದ ನೂಲು ಬಿಚ್ಚುವುದು, ನೂಲನ್ನು ಹುರಿ ಮಾಡುವುದು ರೇಷ್ಮೆ ನೂಲನ್ನು ನೇಯುವುದು ಮತ್ತು ರೇಷ್ಮೆ ಬಟ್ಟೆಗಳನ್ನು ಸಿದ್ಧಗೊಳಿಸುವುದು ಮುಂತಾದ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಈ ಕಸುಬು ಒಂದು ಕಲೆ. ಕೈಗಾರಿಕಾ ವಿಧಾನದ ಜೊತೆಗೆ ಪುರಾತನ ಕಾಲದಿಂದಲೂ ಗ್ರಾಮಗಳಲ್ಲಿ ನುರಿತ ಕೆಲಸಗಾರರಿಂದ ರೇಷ್ಮೆ ಬಟ್ಟೆಗಳು ತಯಾರಾಗುತ್ತಿದ್ದವು. ಭಾರತಕ್ಕೆ ಬ್ರಿಟೀಷರು ಬರುವುದಕ್ಕೆ ಮುಂಚೆಯೇ ಈ ಕೈಗಾರಿಕೆ ನಮ್ಮ ದೇಶದಲ್ಲಿ ಪ್ರಬುದ್ಧಮಾನವಾಗಿತ್ತು. ಮೈಸೂರಿನ ಹುಲಿ ಎನಿಸಿದ್ದ ಟಿಪ್ಪುಸುಲ್ತಾನ್ ಮತ್ತು ಅವರ ತಂದೆ ಹೈದರ್ ರೇಷ್ಮೆ ವ್ಯವಸಾಯದಲ್ಲಿ ಆಸಕ್ತಿ ವಹಿಸಿದ್ದರೆಂಬುದು ಜನನಿತವಾಗಿದೆ. ಚಾಲಿತ ಯಂತ್ರಗಳನ್ನು ಈ ಕೈಗಾರಿಕೆಯಲ್ಲಿ ಬಳಸಲು ಪ್ರಾರಂಭಿಸಿದ್ದು ಈಗ ಸುಮಾರು 125 ವರ್ಷಗಳಿಂದ ಈಚೆಗೆ ಮಾತ್ರ. ಮೊದಲನೆ ಮಹಾಯುದ್ಧದ ನಂತರ ರೇಷ್ಮೆ ಕೈಗಾರಿಕೆಯಲ್ಲಿ ಯಂತ್ರದ ಬಳಸುವಿಕೆ ಪ್ರಾರಂಭವಾದಂದಿನಿಂದ ತೀವ್ರಗತಿಯಲ್ಲಿ ಈ ಕೈಗಾರಿಕೆ ಬೆಳೆಯಲು ಪ್ರಾರಂಭವಾಯಿತು. ನಂತರ ಚೀನ ಮತ್ತು ಜಪಾನ್ ದೇಶಗಳಲ್ಲಿ ತಯಾರಾದ ರೇಷ್ಮೆ ಬಟ್ಟೆಗಳಿಂದ ಪೈಪೋಟಿಯನ್ನು ಎದುರಿಸಬೇಕಾಯಿತು. ಎರಡನೇ ಮಹಾಯುದ್ಧದ ನಂತರ ಉಂಟಾದ ದೇಶದ ರಾಜಕೀಯ ಬದಲಾವಣೆಯಿಂದಾಗಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೇಷ್ಮೆಯನ್ನು ಯಶಸ್ವಿಯಾಗಿ ಮಾರಾಟ ಮಾಡಲು ಬೇಕಾದ ಕ್ರಮಗಳನ್ನು ರೂಪಿಸಲು ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಈ ಕೈಗಾರಿಕೆಯ ಅಭಿವೃದ್ಧಿಗೆ ನಾನಾ ಯೋಜನೆಗಳನ್ನು ರೂಪಿಸುತ್ತಿವೆ.

ರೇಷ್ಮೆ ಬೆಳೆಯಲ್ಲಿ ಭಾರತ ಪ್ರಪಂಚದಲ್ಲಿ ಐದನೇ ಸ್ಥಾನವನ್ನು ಪಡೆದಿದೆ. ಕ್ರಮವಾಗಿ ಜಪಾನ್, ಚೈನಾ, ರಷ್ಯ, ದಕ್ಷಿಣ ಕೊರಿಯ ಇವು ಒಂದು, ಎರಡು, ಮೂರು ಮತ್ತು ನಾಲ್ಕನೆ ಸ್ಥಾನಗಳಲ್ಲಿವೆ.

ರಾಜ್ಯದಲ್ಲಿ ದೊಡ್ಡ ಗುಡಿಕೈಗಾರಿಕೆ:

ರೇಷ್ಮೆ ಕೈಗಾರಿಕೆಯು ಕರ್ನಾಟಕದಲ್ಲಿ ಬಹುದೊಡ್ಡ ಗೃಹ ಕೈಗಾರಿಕೆಯಾಗಿದೆ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ವಿದೇಶಿ ವಿನಿಮಯದ ಗಳಿಕೆಯಲ್ಲಿ ಇದರ ಪಾತ್ರ ಮಹತ್ತರವಾಗಿದೆ. ಈ ರಾಜ್ಯದಲ್ಲಿ ಈ ಕೈಗಾರಿಕೆ 4.5 ಲಕ್ಷ ಸಂಸಾರಗಳಿಗೆ ಪ್ರತ್ಯಕ್ಷ, ಪರೋಕ್ಷವಾಗಿ ಜೀವನಾಧಾರವಾಗಿದೆ. ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ರಾಜ್ಯದ ಪಾತ್ರ ಅತಿ ಹಿರಿದಾಗಿದ್ದು ರಾಷ್ಟ್ರದ ಶೇಕಡ 80 ರಷ್ಟು ಇಲ್ಲೇ ಉತ್ಪಾದನೆಯಾಗುತ್ತದೆ. ಹಳೆಯ ಮೈಸೂರಿನ ಕೆಲವೇ ಜಿಲ್ಲೆಗಳಲ್ಲಿದ್ದ ಈ ಕಸುಬನ್ನು ನಾಡಿನ ಎಲ್ಲ ಕಡೆ ವಿಸ್ತರಿಸಲಾಗುತ್ತಿದೆ. ರೇಷ್ಮೆ ಕೈಗಾರಿಕೆಯಲ್ಲಿ ಅಂದರೆ ರೀಲಿಂಗ್ (ನೂಲು ಬಿಚ್ಚುವುದು) ಕೈಮಗ್ಗ, ಯಂತ್ರಚಾಲಿತ ಮಗ್ಗಗಳು, ಚರಕ, ಕಾಟೇಜ್ ಬೇಸಿನ್, ಫಿಲೇಚರ್ ಬೇಸಿನ್ ಇತ್ಯಾದಿಗಳಲ್ಲಿ ದುಡಿಯುವ ಸುಮಾರು 2 ಲಕ್ಷಕ್ಕಿಂತಲೂ ಹೆಚ್ಚು ದುಡಿಯುವ ಜನರ ಜೀವನ ಮಟ್ಟ ದಿನೇ ದಿನೇ ಕೆಳಗಿಳಿಯುತ್ತಿದೆ. ಈ ಕಲೆಗಾರಿಕೆಯ ಅಭಿವೃದ್ಧಿಯ ಹೆಸರಲ್ಲಿ ಈ ದುಡಿಯುವವರ ಶೋಷಣೆ ಅತಿ ಹೆಚ್ಚಾಗುತ್ತಿದೆ. ಇದರ ವಿರುದ್ಧ ಸಂಘಟಿತ ಹೋರಾಟ ನಡೆಸಲು ಒಂದು ವಿಶಾಲ ತಳಹದಿಯ ಮೇಲೆ ಬಲಯುತವಾದ ಸಂಘಟನೆ ಒಂದು ಅತ್ಯಾವಶ್ಯಕ.

ಭಾರತದಲ್ಲಿ ಈಗ 2500 ಟನ್ ರೇಷ್ಮೆ ಉತ್ಪಾದನೆಯಾಗುತ್ತಿರುವುದನ್ನು 1985ರ ಹೊತ್ತಿಗೆ 4500 ಟನ್ ಉತ್ಪಾದನೆ ಮಾಡಬೇಕೆಂದು ಯೋಜನೆಗಳನ್ನು ಹಾಕಲಾಗುತ್ತಿದೆ. ಈ ಅಭಿವೃದ್ಧಿಗಾಗಿ ನಮ್ಮ ರಾಜ್ಯದಲ್ಲಿ ವಿಶ್ವ ಬ್ಯಾಂಕ್ 80 ಕೋಟಿ ರೂಪಾಯಿಗಳ ಸಹಾಯ ನೀಡಲಿದೆ. ಇದರ ಜೊತೆಗೆ ಸ್ವಿಸ್ ಕಂಪೆನಿಯೊಂದು ಧನ ಸಹಾಯ ನೀಡಲಿದೆ. ಸುಮಾರು 19 ಸಾವಿರ ಹೆಕ್ಟರ್ ಜಮೀನಿನಲ್ಲಿ ಹಿಪ್ಪನೇರಳೆ ಬೆಳೆಯನ್ನು ವಿಸ್ತರಿಸುವ ಒಂದು ಯೋಜನೆ ಇದೆ. ಈಗಾಗಲೇ 24 ಸಾವಿರ ಹೆಕ್ಟರ್ ಜಮೀನಿನಲ್ಲಿ ಸಾಂಪ್ರದಾಯಿಕವಾಗಿ ಬೆಳೆ ಮಾಡುತ್ತಿರುವುದನ್ನು ಆಧುನೀಕರಣದ ಬೆಳೆಗೆ ಪರಿವರ್ತಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಈಗಾಗಲೇ 2 ಲಕ್ಷ ಕುಟುಂಬದವರು ರೇಷ್ಮೆ ವ್ಯವಸಾಯದಲ್ಲಿ ತೊಡಗಿದ್ದಾರೆ. ಇವರು 30 ಸಾವಿರ ಟನ್ ರೇಷ್ಮೆ ಗೂಡನ್ನು ಬೆಳೆಯುತ್ತಾರೆ. ಇದರ ಬೆಲೆ ಸುಮಾರು 65 ಕೋಟಿ ರೂಪಾಯಿಗಳಾಗುತ್ತದೆ. ಈ ಗೂಡನ್ನು 6000 ರೀಲರ್ ಕುಟುಂಬಗಳು ಬಳಸಿ ಸುಮಾರು 2500ಟನ್ ರೇಷ್ಮೆ ನೂಲನ್ನು ತಯಾರಿಸುತ್ತಾರೆ. ಇದರ ಬೆಲೆ ಸುಮಾರು 75 ಕೋಟಿ ರೂಪಾಯಿಗಳಾಗುತ್ತದೆ. ಇದು ದೇಶದ ಉತ್ಪಾದನೆಯ ಶೇಕಡಾ 85 ರಷ್ಟಾಗುತ್ತದೆ. ಇಷ್ಟಾದರು ವ್ಯವಸಾಯದಲ್ಲೇ ತೊಡಗಿರುವವರ ಜೀವನ ಸ್ಥಿತಿ ಚಿಂತಾಜನಕವಾಗಿದೆ. ಕಾರಣ ಪ್ರತಿಯೊಂದು ಹಂತದಲ್ಲೂ ಇರುವ ಮಧ್ಯವರ್ತಿ ದಳ್ಳಾಳಿಗಳೇ ಉತ್ಪಾದನೆಯ ಬಹುಪಾಲನ್ನು ಹೀರಿಕೊಳ್ಳುತ್ತಾರೆ.

ಉದ್ದೇಶ ಫಲಕಾರಿಯಾಗಿಲ್ಲ :

ಕರ್ನಾಟಕ ರಾಜ್ಯ ಸರ್ಕಾರ ಈಗ ನೂಲಿನ ವ್ಯಾಪಾರಕ್ಕೆ ಒಂದು ವಿನಿಮಯ ಕೇಂದ್ರವನ್ನು ಸ್ಥಾಪಿಸಿದೆ. ಇದಕ್ಕೆ ಇದ್ದ ವಿರೋಧವನ್ನೆಲ್ಲ ಕ್ರಮಕ್ರಮವಾಗಿ ಎದುರಿಸುತ್ತಾ ಬಂದಿದೆ. ರೇಷ್ಮೆ ಗೂಡಿನ ಮಾರುಕಟ್ಟೆ ಈ ಹಿಂದೆಯೇ ರೂಪಗೊಂಡಿದ್ದು ಅದು ಇಂದು ಚಾಲ್ತಿಯಲ್ಲಿರುತ್ತದೆ. ಈ ಕ್ರಮಗಳೆಲ್ಲವು ಮಧ್ಯವರ್ತಿ ದಳ್ಳಾಳಿಗಳನ್ನು ದೂರ ಮಾಡುವ ಉದ್ದೇಶದಿಂದ ಕೂಡಿದ್ದರೂ ಕಾನೂನಿನಲ್ಲಿರುವ ಮತ್ತು ಕಾರ್ಯನಿರ್ವಹಣೆಯಲ್ಲಿರುವ ಲೋಪದೋಷಗಳಿಂದಾಗಿ ಅಪೇಕ್ಷಿತ ಉದ್ದೇಶ ಫಲಕಾರಿಯಾಗಿಲ್ಲ.

ರಾಜ್ಯ ಸರ್ಕಾರವೇ ಸುಮಾರು 2000 ಎಕರೆ ಪ್ರದೇಶದಲ್ಲಿ ರೇಷ್ಮೆ ವ್ಯವಸಾಯವನ್ನು ಕೈಗೊಂಡು ಬೆಳೆಯುವರಿಗೆ ಸುಧಾರಿತ ರೇಷ್ಮೆ ತಳಿಗಳನ್ನೂ, ಹಿಪ್ಪನೇರಳೆ ಕಡ್ಡಿಗಳನ್ನು ಒದಗಿಸಿ ರೇಷ್ಮೆ ವ್ಯವಸಾಯದ ತರಪೇತಿಯನ್ನು ಕೊಡುತ್ತಿದೆ. ಇದರ ಜೊತೆಗೆ ಕೇಂದ್ರ ಸರ್ಕಾರವು ಕೂಡ ಸೀಮಿತ ಪ್ರದೇಶಗಳಲ್ಲಿ ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ರೇಷ್ಮೆ ಮಂಡಲಿಯನ್ನು ರಚಿಸಿ ಆ ಮೂಲಕ ಸಂಶೋಧನೆ ಮತ್ತು ತರಪೇತಿ ಕೇಂದ್ರಗಳನ್ನು ಸ್ಥಾಪಿಸಿದೆ. ಈ ಪ್ರದೇಶಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಈ ಎರಡು ಸರ್ಕಾರಗಳೂ ಗಮನಹರಿಸದೆ ಇರುವುದು ಖಂಡನೀಯ. ಅತಿ ಹೆಚ್ಚೆಂದರೆ ದಿನ ಒಂದಕ್ಕೆ 5/-ರೂನ ವೇತನದಲ್ಲಿ ಬದುಕುವುದು ಒಂದು ಕಡೆ ಇರುವಾಗ ಇನ್ನೊಂದು ಕಡೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೌಕರರ ವೇತನವನ್ನೂ ಪಡೆಯುತ್ತಿರುವವರು ಇರುವುದೊಂದು ಹಾಸ್ಯಾಸ್ಪದ. ರಾಜ್ಯದಲ್ಲಿ ಸರ್ಕಾರದ ಅಧೀನದಲ್ಲಿ 7 ಫಿಲೇಚರ್ (ನೂಲು ಬಿಚ್ಚುವ) ಕಾರ್ಖಾನೆಗಳೂ, ಒಂದು ನೂಲು ಹುರಿಮಾಡುವ ಕಾರ್ಖಾನೆ ಒಂದು ವೀವಿಂಗ್ ಫ್ಯಾಕ್ಟರಿಯೂ ಮತ್ತು ಒಂದು ಸ್ಪನ್ ಸಿಲ್ಕ್ ಕಾರ್ಖಾನೆಯೂ ಇದೆ ಅಂದರೆ ರೇಷ್ಮೆ ಕೈಗಾರಿಕೆಯ ಮಟ್ಟಿಗೆ ಹೇಳುವುದಾದರೆ ಸರ್ಕಾರವೇ ಒಂದು ದೊಡ್ಡ ಭೂಮಾಲೀಕ ಮತ್ತು ಅನೇಕ ಕಾರ್ಖಾನೆಗಳ ಒಡೆಯ. ಈ ದೊಡ್ಡ ಭೂಮಾಲಿಕ ಮತ್ತು ಕಾರ್ಖಾನೆಗಳ ಒಡೆಯ ಸತತವಾಗಿ ದುಡಿಯುವ ನೌಕರರನ್ನು ಹೇಗೆ ನೋಡಿಕೊಳ್ಳುತ್ತಿದೆ ಎಂಬುದನ್ನು ಪರಿಶೀಲಿಸಿದರೆ, ಅದು ಒಬ್ಬ ಮಾದರೀಯ ಯಜಮಾನನಾಗಿರುವಂತೆ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ಇದರಿಂದಾಗಿ ಖಾಸಗಿಯವರ ಜಮೀನಿನಲ್ಲಾಗಲಿ ಮತ್ತು ಖಾಸಗಿ ಮಾಲೀಕರ ಕಾರ್ಖಾನೆಗಳಲ್ಲಾಗಲಿ ದುಡಿಯುವವರ ಸ್ಥಿತಿ ಮತ್ತಷ್ಟು ಕೀಳು ಮಟ್ಟದ್ದಾಗಿದೆ.

ಕಾರ್ಮಿಕರ ರಕ್ಷಣೆಗೆ ಇರುವ ಅನೇಕ ಕಾನೂನುಗಳ ಸೌಲಭ್ಯಗಳು ಇವರಿಗೆ ಇಲ್ಲವಾಗಿವೆ. ಉದಾ : 8 ಗಂಟೆಯ ಕೆಲಸ, ಕನಿಷ್ಟ, ಬೋನಸ್, ಬೆಲೆ ಏರಿಕೆಗೆ ತಕ್ಕ ತುಟ್ಟಿಭತ್ಯ ಇತ್ಯಾದಿಗಳು.

ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಯ ಜೊತೆಗೆ ರೇಷ್ಮೆ ಕೈಗಾರಿಕೆಯಲ್ಲಿ ದುಡಿಯುವ ಶ್ರಮಜೀವಿಗಳ ಅಭಿವೃದ್ಧಿಯೂ ಹೊಂದಿಕೊಂಡಿದೆ ಎಂಬುದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮನಗಾಣದಿದ್ದಲ್ಲಿ ಅವುಗಳು ಮನಗಾಣುವಂತೆ ಮಾಡುವುದು ಅತ್ಯಾವಶ್ಯಕ. ಶ್ರಮಜೀವಿಗಳ ಅಭಿವೃದ್ಧಿಯೇ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗೆ ಸರಿಯಾದ ಅಡಿಪಾಯ. ●

ರಾಯಚೂರಿನಲ್ಲಿ ಪ್ರಗತಿಪರ ಮಹಿಳಾ ಸಂಘದ ಸ್ಥಾಪನೆ

ಶತಶತಮಾನಗಳಿಂದಲೂ ಮಹಿಳೆಯರ ಮೇಲೆ ಆಗುತ್ತಿರುವ ಮಾನಭಂಗ ಅಲ್ಲದೆ ವಿವಿಧ ಶೋಷಣೆಗಳ ಭೀಕರ ಸ್ವರೂಪವನ್ನು ಪರಿಶೀಲಿಸಿ ಅವರಲ್ಲಿ ರಾಜಕೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆ ಮೂಡಿಸಿ ಸಮಾಜದಲ್ಲಿ ಬೇರೂರಿರುವ ಅನ್ಯಾಯ ಅಸಮಾನತೆಗಳನ್ನು ಕಿತ್ತೊಗೆದು ಹೊಸ ವ್ಯವಸ್ಥೆಗಾಗಿ ಹೋರಾಡುತ್ತಿರುವ ದುಡಿಯುವ ವರ್ಗದ ಹೋರಾಟದೊಡನೆ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸಿದ್ಧರಾಗುವಂತೆ ಎಲ್ಲ ಮಹಿಳೆಯರನ್ನು ಸಂಘಟಿಸುವ ಉದ್ದೇಶದಿಂದ "ಪ್ರಗತಿಪರ ಮಹಿಳಾ ಸಂಘ"ವು ದಿನಾಂಕ 6-4-1980 ರವಿವಾರ ರಾಯಚೂರ ನಗರದಲ್ಲಿ ತನ್ನ ಉದ್ಘಾಟನಾ ಸಮಾರಂಭದೊಂದಿಗೆ ಅಸ್ತಿತ್ವಕ್ಕೆ ಬಂದಿತು. ಸಮಾರಂಭದಂದು ಸಂಘದ ಉತ್ಸಾಹಿ ಕಾರ್ಯಕರ್ತರಲ್ಲಿ ಒಬ್ಬರಾದ ಕು॥ ಸುಲೋಚನಾ ಇವರು ಅತಿಥಿಗಳನ್ನು ಹಾಗೂ ಸಭಿಕರನ್ನು ಸ್ವಾಗತಿಸಿದರು. ಶ್ರೀಮತಿ ಶಾಮಲಾ ಇವರು ಅಧ್ಯಕ್ಷರ, ಉದ್ಘಾಟಕರ ಹಾಗೂ ಭಾಷಣಕಾರರ ಪರಿಚಯದೊಂದಿಗೆ ಸಂಘದ ಪರಿಚಯ, ಗೊತ್ತು ಗುರಿ ಹಾಗೂ ಮುಂದಿನ ಉದ್ದೇಶಗಳನ್ನು ಮಂಡಿಸಿದರು. ಇದರಲ್ಲಿ ಅವರು ಸ್ತ್ರೀ, ಪುರುಷ ಇಬ್ಬರನ್ನು ಶೋಷಿಸುತ್ತಿರುವ ಬಂಡವಾಳಶಾಹಿ ಆರ್ಥಿಕ ಪದ್ಧತಿಯುಳ್ಳ ಸಮಾಜದ ವ್ಯವಸ್ಥೆಯ ವಿರುದ್ಧ ಸ್ತ್ರೀ ಪುರುಷರ ಜೊತೆಗೂಡಿಯೇ ಹೋರಾಡಬೇಕೇ ವಿನಾಃ ಪುರುಷರ ವಿರುದ್ಧ ಅಲ್ಲ ಎಂದು ಹೇಳಿದರು. ಸಂಘವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರಿನ ಮಾನಸ ಗಂಗೋತ್ರಿಯ ಪ್ರಾಧ್ಯಾಪಕರಾದ ಶ್ರೀಮತಿ ಡಿ ವಿಜಯಾ ಅವರು ಎಲ್ಲ ಜಾತಿಯ ಹಾಗೂ ಎಲ್ಲ ವರ್ಗದ ಮಹಿಳೆಯರು ಒಂದಲ್ಲ ಒಂದು ರೀತಿಯಲ್ಲಿ ಶೋಷಿತರೇ ಶೋಷಣೆಯ ಮುಖಗಳು ಹಾಗೂ ಒತ್ತಡಗಳು ಬೇರೆ ಬೇರೆಯಾಗಿರಬಹುದು. ಮಧ್ಯಮ, ಕೆಳಮಧ್ಯಮ ಹಾಗೂ ದುಡಿಯುವ ವರ್ಗದ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿತರಾಗಿದ್ದರೆ; ಆರ್ಥಿಕವಾಗಿ ಸ್ವತಂತ್ರರಾದ ಅಥವಾ ಉತ್ತಮ ಮಟ್ಟದಲ್ಲಿರುವ ಮಹಿಳೆಯರು ಸಂಪ್ರದಾಯದ ಜಿಡ್ಡು ಹಿಡಿದ ಮೌಲ್ಯಗಳನ್ನೇ ರೂಢಿಸಿಕೊಂಡ್ಡು ಕೇವಲ ಅಲಂಕಾರಿಕ ಗೊಂಬೆಗಳಾಗಿ ಮಾನಸಿಕ ದಾಸ್ಯದಲ್ಲಿ ತೊಳಲಾಡುತ್ತ ತಮ್ಮ ವ್ಯಕ್ತಿತ್ವವನ್ನೇ ಕಂಡುಕೊಳ್ಳದಂತಹ ಶೋಷಣೆಗೆ ಒಳಗಾಗಿದ್ದಾರೆ ಕಾರಣ ಎಲ್ಲ ಶೋಷಿತ ವರ್ಗದ ಹಾಗೂ ಎಲ್ಲ ಜಾತಿಯ ಮಹಿಳೆಯರು ಒಂದಾಗಿ ಹೋರಾಡಲು ಇಂತಹ ಸಂಘ ಸಂಸ್ಥೆಗಳು ಅವಶ್ಯಕ ಎಂದು ಸಾರಿದರು. ಭಾಷಣಕಾರರಾದ ಕು॥ ಶರೀಫಾ, ಶ್ರೀಮತಿ ಶೀಲಾ ಹಾಗೂ ಶ್ರೀಮತಿ ಬಿ ಟಿ ಲಲಿತಾ ನಾಯಕ ಇವರುಗಳು ಕ್ರಮವಾಗಿ ಪ್ರಚಲಿತ ಮೌಲ್ಯಗಳಲ್ಲಿ ಮಹಿಳೆಯರ ಶೋಷಣೆ ಅವರ ಅಧಃಪತನಕ್ಕೆ ಸಾಮಾಜಿಕ ಹಾಗೂ ಚಾರಿತ್ರಿಕ ಹಿನ್ನಲೆ ಸ್ವಾತಂತ್ರ್ಯದ ಅರ್ಥ ಅದನ್ನು ಹೇಗೆ ಪಡೆಯಬೇಕು ಮತ್ತು ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದರಲ್ಲದೆ ಮಹಿಳೆಯರ ಶೋಷಣೆಯ ಭೀಕರ ಸ್ವರೂಪಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ ಇದನ್ನು ಹೋಗಲಾಡಿಸಲು ಎಲ್ಲ ಮಹಿಳೆಯರು ಸಂಘಟಿತರಾಗಿ ಇಂತಹ ಸಂಘಗಳನ್ನು ಕಟ್ಟಿಕೊಳ್ಳುವದಷ್ಟೇ ಅಲ್ಲದೆ ಹೊಸ ಮೌಲ್ಯಗಳನ್ನು ರೂಪಿಸಿ ಹೊಸ ವ್ಯವಸ್ಥೆಗಾಗಿ ಹೋರಾಡುವದು ಅವಶ್ಯವೆಂದು ಮಂಡಿಸಿದರು.

ಅಧ್ಯಕ್ಷರಾದ ಸಿಂಧನೂರಿನ ಪ್ರೌಢ ಶಾಲೆಯ ಪ್ರಾಧ್ಯಾಪಕಿಯಾದ ಶ್ರೀಮತಿ ಗಿರಿಜಾದೇವಿ ಇವರು ಸಂಪ್ರದಾಯದ ಕಪಿಮುಷ್ಟಿಯಲ್ಲಿ ಪತಿಯೇ ಪರದೈವ ಅವನು ಎಷ್ಟೇ ಕೆಟ್ಟವನಾದರೂ ಮಹಿಳೆ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡು ಅವನೇ ದೇವರೆಂದು ನಂಬಿ ಅದೇ ಸಂಪ್ರದಾಯದಲ್ಲಿ ಮುಂದುವರೆಯದೆ ಇಬ್ಬರೂ ಒಬ್ಬರಿಗೊಬ್ಬರು ಪರಸ್ಪರ ಪೂರಕವಾಗಿ ಸಮಾಜದ, ಕುಟುಂಬದ ಆಗುಹೋಗುಗಳನ್ನು ಸುಖ ದುಃಖಗಳನ್ನು ಸಮನಾಗಿ ಹಂಚಿಕೊಂಡು ಇಬ್ಬರು ಸರಿಸಮಾನರಾಗಿ ಬಾಳುವಂತಹ ಹೊಸ ಮೌಲ್ಯಗಳನ್ನು ಸೃಷ್ಟಿಸಿ ಸಮಾಜದಲ್ಲಿಯ ಅನ್ಯಾಯ ಅಸಮಾನತೆಗಳ ವಿರುದ್ಧ ಇಬ್ಬರೂ ಜೊತೆಜೊತೆಯಾಗಿಯೆ ಹೋರಾಡಬೇಕು. ಇಂತಹ ಮೌಲ್ಯಗಳನ್ನು ಸೃಷ್ಟಿಸುವ ಹಾಗೂ ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಉದ್ದೇಶದಿಂದ ಹುಟ್ಟಿಕೊಂಡ ಈ "ಪ್ರಗತಿಪರ ಮಹಿಳಾ ಸಂಘ"ದ ಕಾರ್ಯಕರ್ತರು ಉತ್ಸಾಹದಿಂದ ಕೆಲಸಮಾಡಿ ಸಂಘವನ್ನು ಬಲಪಡಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಡುವವರ ಜೊತೆಗೆ ಹೊಸ ಸಮಾಜದ ವ್ಯವಸ್ಥೆಗಾಗಿ ಶ್ರಮಿಸುತ್ತಿರುವ ದುಡಿಯುವ ವರ್ಗದ ಹೋರಾಟದೊಂದಿಗೆ ಒಂದಾಗಿ ಹೋರಾಡುವಲ್ಲಿ ಯಶಸ್ಸುಗಳಿಸಲಿ ಎಂದು ಹಾರೈಸಿದರು.

ಕೊನೆಯಲ್ಲಿ ಸಂಘದ ಉತ್ಸಾಹಿ ಕಾರ್ಯಕರ್ತರಲ್ಲಿ ಒಬ್ಬರಾದ ಶ್ರೀಮತಿ ಹರಿಣಿ ಚಕ್ಕೆರಿಯವರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು. ಇದರ ಅಂಗವಾಗಿ ಆದಿನ ಮಹಿಳೆಯ ಸಮಸ್ಯೆಗಳಿಗೆ ಸಂಬಂಧಪಟ್ಟ ಪುಸ್ತಕ ಹಾಗೂ ಕ್ಯಾಲೆಂಡರ್‌ಗಳ ಪ್ರದರ್ಶನ ಏರ್ಪಡಿಸಲಾಗಿತ್ತು ಅಲ್ಲದೆ ಇನ್ನು ಮುಂದಿನ ಪ್ರತಿ ಕಾರ್ಯಕ್ರಮದಲ್ಲೂ ಈ ತರಹ ಪುಸ್ತಕ ಪ್ರದರ್ಶನ ಇಡಲಾಗುವದೆಂದು ಸಂಘವು ತಿಳಿಸುತ್ತದೆ. ಅಂದಿನ ಸಮಾರಂಭದಲ್ಲಿ ಸುಮಾರು 50 ಜನ ಮಹಿಳೆಯರು ಪಾಲ್ಗೊಂಡಿದ್ದರು. ಇನ್ನು ಮುಂದೆ ಸಂಘವು 15 ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ಕಾರ್ಯಕ್ರಮಗಳನ್ನು ಇಡುವದಲ್ಲದೆ ರಾಯಚೂರ ನಗರದ ಹಾಗೂ ಸುತ್ತಮುತ್ತಲಿನ ಮಹಿಳೆಯರ ಯಾವುದೇ ತರಹದ

(7ನೇ ಪುಟ ನೋಡಿ)

'ಕೃಷ್ಣೇಗೌಡ ಕೇಡಿ — ಹಾಕಿ ಅವನಿಗೆ ಬೇಡಿ'

'ಕೃಷ್ಣೇಗೌಡ ಕೇಡಿ-ಹಾಕಿ ಅವನಿಗೆ ಬೇಡಿ', ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಭಾರತ ಕಮ್ಯುನಿಸ್ಟ್ ಪಕ್ಷ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ ಮತ್ತು ಸಮುದಾಯಕ್ಕೆ ಸೇರಿದ ಸಾವಿರಾರು ಸದಸ್ಯರ ಸಿಟ್ಟಿನ ಬೇಡಿಕೆ ಇದು.

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಹುಣಸಿಕೋಟೆ ಗ್ರಾಮದ ಬಡ ರೈತ ಕುಂಬಾರ ಶೇಷಗಿರಿಯಪ್ಪನವರನ್ನು ಕಳೆದ ಮಾರ್ಚ್ 30ರಂದು ಕೊಲೆ ಮಾಡಿದನೆಂದು ಮುಖ್ಯ ಆರೋಪಿಯಾಗಿರುವ ಮಾಲೂರು ತಾಲ್ಲೂಕ್‌ಬೋರ್ಡ್ ಅಧ್ಯಕ್ಷ ಕಾಂಗ್ರೆಸ್ ಪಕ್ಷದ ಕೃಷ್ಣೇಗೌಡನನ್ನು ಬಂಧಿಸಿ-ಬಡವರಿಗೆ ನ್ಯಾಯ ದೊರಕಿಸಿ ಕೊಡಿ ಎಂಬ ಮುಖ್ಯ ಬೇಡಿಕೆಯ ಬೆಂಬಲಾರ್ಥ ಬೆಂಗಳೂರು ನಗರದಲ್ಲಿ ಏಪ್ರಿಲ್ 14 ರಂದು ಬೃಹತ್ ಪ್ರದರ್ಶನ ಜರುಗಿತು.

ಮೈಸೂರು ಬ್ಯಾಂಕ್ ಚೌಕದಿಂದ ಹೊರಟ ಮೆರವಣಿಗೆಕಾರರು ವಿಧಾನ ಸೌಧಕ್ಕೆ ಮುತ್ತಿಗೆ ಹಾಕಿದರು. ಆಳುವ ದೊರೆಗಳಿಗೆ ಕೇಳುವಂತೆ ಆಕ್ರೋಶದಿಂದ ತಮ್ಮ ಬೇಡಿಕೆಗಳನ್ನು ಕೂಗಿ ಹೇಳಿದರು. ಕೊಲೆಗಡುಕ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂದರು. ಜಮೀನ್ದಾರಿ ಪದ್ಧತಿಯನ್ನು ನಾಶಮಾಡದ ಜಮೀನ್ದಾರಿ-ಬಂಡವಾಳಗಾರರ ಸರ್ಕಾರಕ್ಕೆ ಧಿಕ್ಕಾರವೆಂದರು. ಮಹಿಳೆಯರ ಮಾನಭಂಗ ಮಾಡುತ್ತಿರುವವರ ವಿರುದ್ಧ ಕ್ರಮಕೈಗೊಳ್ಳದ ಇಂದಿರಾ ಸರ್ಕಾರಕ್ಕೆ ಸಾವಿರ ಧಿಕ್ಕಾರವೆಂದರು.

ನೋವಿಗೆ ಗುರಿಯಾದವರ ಅಂತರಾಳದ ಧ್ವನಿಯಾಗಿ ಸಿಡಿದು ಘೋಷಣೆ ಕೂಗುತ್ತಿದ್ದವರನ್ನು ಪ್ರತಿನಿಧಿಸಿ ಹೋದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಶಾಖೆಯ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಎಸ್. ಕೃಷ್ಣನ್, ದಲಿತ ಸಂಘರ್ಷ ಸಮಿತಿಯ ನಾಯಕ ರಾಮಯ್ಯ, ಸಮುದಾಯದ ಸಿ. ಜಿ. ಕೃಷ್ಣಸ್ವಾಮಿ, ಬಂಡಾಯ ಸಾಹಿತ್ಯ ಸಂಘಟನೆಯ ಬರಗೂರು ರಾಮಚಂದ್ರಪ್ಪ, ಅವರುಗಳಿಗೆ ಆಳುವ ದೊರೆಗಳು ಯಾರೂ ಸಿಕ್ಕಲಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಕಚೇರಿಯಲ್ಲಿ ಇದ್ದೂ ಇಲ್ಲ ಎನ್ನಿಸಿಕೊಂಡರು. ಸರಿ, ಕೈಗೆ ಸಿಕ್ಕಿದ ಗೃಹ ಖಾತೆಯ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಯಿತು. ಅರ್ಥ ಸಚಿವ ವೀರಪ್ಪ ಮೊಯಿಲಿ ಅಡ್ಡ ಸಿಕ್ಕಿದರು. ಅವರಲ್ಲೂ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಂತೆ, ಬಡವರಿಗೆ ರಕ್ಷಣೆ ಕೊಡಿಸುವಂತೆ ಮನವಿಮಾಡಿಕೊಳ್ಳಲಾಯಿತು. 'ಕೊಲೆಗಡುಕನೊಬ್ಬನಿಗೆ ಜಾಮೀನು ಸಿಗುವಂತೆ ನಮ್ಮ ನ್ಯಾಯಾಂಗ ವ್ಯವಸ್ಥೆ ಇದೆ. ನಾನೇನು ಮಾಡಲಿ' ಎಂದು ತಮ್ಮ ಅಸಹಾಯಕತೆ ತೋಡಿಕೊಂಡರಂತೆ ಅರ್ಥ ಸಚಿವರು.! (ಅಪಾದಿತ ಕೃಷ್ಣೇಗೌಡನಿಗೆ ಮುಂಜಾಗರೂಕತಾ ಜಮೀನು ಸಿಕ್ಕಿದೆ) ಹರಿಜನ-ಗಿರಿಜನ ಮತ್ತು ದುರ್ಬಲ ವರ್ಗಗಳ ಜನತೆಯ 'ರಕ್ಷಣೆ' ಮಾಡುವ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದಿಂದ; ನೋವು-ಸಿಟ್ಟಿನ ಪ್ರತಿಭಟನೆ ತೋರಿದ ಮೆರವಣಿಗೆಕಾರರಿಗೆ ಯಾವ ನಿರ್ದಿಷ್ಟ ಆಶ್ವಾಸನೆಯೂ ಸಿಕ್ಕಲಿಲ್ಲ. ಸರ್ಕಾರದ ಈ ಬೇಜವಾಬ್ದಾರಿ ನಡೆಯನ್ನು ಕಂಡ ಬಡ ಜನರು ಜನತೆಯ ಬಳಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಮತ್ತೆ ಮೆರವಣಿಗೆಯಲ್ಲಿ ಹೊರಟರು. ಏಜೀಸ್ ಆಫೀಸ್, ಮಹಾರಾಣಿ ಕಾಲೇಜ್ ವೃತ್ತ, ಜನರಲ್ ಹಾಸ್ಪಿಲ್ ಮೂಲಕ ಬೆಂಗಳೂರು ನಗರದ ಜನನಿಬಿಡ ಪ್ರದೇಶ ಮೆಜೆಸ್ಟಿಕ್ಕಿಗೆ ಮೆರವಣಿಗೆಕಾರರು ಬಂದರು. 'ನೆನ್ನೆ ಶೇಷಗಿರಿಯಪ್ಪನನ್ನು ಕೊಂದಿದ್ದಾರೆ. ನಾಳೆ ನಮ್ಮೆಲ್ಲರನ್ನು ಕೊಲ್ಲುತ್ತಾರೆ. ದಯವಿಟ್ಟು ಎಚ್ಚರಗೊಳ್ಳಿ' ಎಂದು ಹೇಳಿದರು ಮೆರವಣಿಗೆ ವೀಕ್ಷಿಸಿದ ಹತ್ತಾರು ಸಾವಿರ ಜನಕ್ಕೆ. 'ಜಮೀನ್ದಾರಿ ಪದ್ಧತಿಯನ್ನು ನಾಶಗೊಳಿಸಿ. ಬಂಡವಾಳಗಾರರ ಸರ್ಕಾರವನ್ನು ಕಿತ್ತೆಸೆಯಿರಿ'. ಮೆರವಣಿಗೆಕಾರರು ಜನತೆಗೆ ಮತ್ತೆ ಮತ್ತೆ ಮಾಡಿಕೊಂಡ ಮನವಿ ಇದು.

ಸಂಜೆ ಆರುವರೆಗೆ ಚಿಕ್ಕಲಾಲ್‌ಬಾಗಿನಲ್ಲಿ ಸಾರ್ವಜನಿಕ ಸಭೆ. ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ನೋವಿನ ಹಾಡು ಹೇಳಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿ. ಪಿ. ಐ. (ಎಂ) ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಹೇಳಿದರು: "ಗೆಳೆಯರೆ ನಾವು ಇಲ್ಲಿ ಸೇರಿರುವುದು ಬೇಸರದಿಂದ-ಸಿಟ್ಟಿನಿಂದ." ಪ್ರಾಣ ರಕ್ಷಣೆ ಕೋರಿ ಕೆಳಗಿನಿಂದ ಮೇಲಿನ ಹಂತದವರೆಗೆ ಅರ್ಜಿ ಸಲ್ಲಿಸಿದರೂ ಶೇಷಗಿರಿಯಪ್ಪನವರಿಗೆ ರಕ್ಷಣೆ ಕೊಡದ ಪೋಲೀಸ್ ಅಧಿಕಾರಿಗಳನ್ನು ಸರ್ಕಾರವನ್ನು ಖಂಡಿಸಿದರು ಕಾಂ. ಭಟ್.

ಕೋಟ್ಯಾಂತರ ಕಪ್ಪು ಜನರ ವೊಟ್ಟ ಮೊದಲ ಮಾತಾದ ಡಾ. ಅಂಬೇಡ್ಕರ್ ಅವರ 89ನೇ ಜನ್ಮ ದಿನವಾದ ಇಂದು ನಾವು ಪ್ರತಿಜ್ಞೆ ಮಾಡುವ ದಿನ ಎಂದರು. ಮುಂದೆ ಶೇಷಗಿರಿಯಪ್ಪನಂತಹ ಇನ್ನೊಬ್ಬರ ಕೊಲೆ ಆಗದಂತೆ ಜನರನ್ನು ಎಚ್ಚರಿಸುವ ಪ್ರತಿಜ್ಞೆಯ ದಿನ ಇದಾಗಬೇಕು ಎಂದರು. ಮೇಲ್‌ಜಾತಿ-ಮೇಲು ವರ್ಗದವರ ಹಿತರಕ್ಷಣೆ ಮಾಡುತ್ತಿರುವ ಪ್ರಸಕ್ತ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ವಿನಾಶ ಮಾಡದ ಹೊರತು ನಮಗೆ ಶಾಂತಿ-ನೆಮ್ಮದಿ ಇಲ್ಲ ಎಂದ ಕಾಂ ಎಂ.ಕೆ., ಬಡ ರೈತನನ್ನು ಕೊಂದ ಆರೋಪವಿರುವ ಕೃಷ್ಣೇಗೌಡನನ್ನು ಬಂಧಿಸಿ ತೋರಿಸಿ ಎಂದು ಸರ್ಕಾರವನ್ನು ಆಗ್ರಹಪಡಿಸಿದರು.

ಸರ್ಕಾರಕ್ಕೆ ನೋಟೀಸು :

ಬಡಜನರ ಮೊರೆ ಕೇಳಲು ವಿಧಾನ ಸೌಧದಲ್ಲಿ ಒಬ್ಬರೂ ದಿಕ್ಕಿಲ್ಲದ ರಾಜ್ಯ ಮಂತ್ರಿಮಂಡಲವನ್ನು ಟೀಕಿಸಿದ ಸಿ.ಪಿ.ಐ. ಕಾರ್ಯದರ್ಶಿ ಕಾಂ. ಎಂ. ಎಸ್. ಕೃಷ್ಣನ್; 'ನಾವಿಲ್ಲಿ ಸೇರಿರುವುದು ಸರ್ಕಾರಕ್ಕೆ ನೋಟೀಸ್ ಕೊಡಲು' ಎಂದರು. ಕೊಲೆಗಡುಕರಿಗೆ ಜಾಮೀನು ಕೊಟ್ಟ ಈ ವ್ಯವಸ್ಥೆಯನ್ನು ದುಡಿಯುವ ಜನ ನುಚ್ಚುನೂರು ಮಾಡುತ್ತಾರೆ ಎಂದರು. ಚಿಕ್ಕಮಗಳೂರು ಬಳಿಯ ಎಸ್ಟೇಟ್‌ನ ಹರಿಜನ ಕಾರ್ಮಿಕರ ಮೇಲಿನ ದಬ್ಬಾಳಿಕೆ, ಕಾತಗುಣಿ ಎಸ್ಟೇಟ್ ಕಾರ್ಮಿಕರಿಗೆ ಆದಿರುವ ಅನ್ಯಾಯದ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದ ರಾಜ್ಯಸರ್ಕಾರವು ಕುಂಭಕರ್ಣ ನಿದ್ರೆ ಮಾಡುತ್ತಿದೆ ಎಂದರು.

'ಹೋರಾಟದ ಹಾಡುಗಳು' ಪುಸ್ತಕ ಬಿಡುಗಡೆ ಮಾಡಿದ ದಲಿತಸಂಘರ್ಷ ಸಮಿತಿಯ ಮುಂದಾಳು ವಿಜಯ ಪಾಟೀಲರು ಮಾತನಾಡಿ ಭಾರತ ಕೊಲೆಗಳ ನಾಡಾಗುತ್ತಿದೆ ಎಂದರು. ಕಾಂಗ್ರೆಸ್ ಜನತಾದಂತಹ ಪಕ್ಷಗಳ ಕಡೆ ನೋಡಿ ನೋವುಂಡೆವು. ಗಾಂಧಿ, ಇಂಧಿರಾಗಾಂಧಿ ಮತ್ತು ಜಗಜೀವನ ರಾವ್ ಅವರಲ್ಲಿ ಭರವಸೆ ಇಟ್ಟು ಕಂಗೆಟ್ಟೆವು. ಇನ್ನು ಮುಂದಾದರು ಸಿ. ಪಿ. ಐ. (ಎಂ), ಸಿ. ಪಿ. ಐ. ದಲಿತ ಸಂಘರ್ಷ ಸಮಿತಿಯಂತಹ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕಡೆ ಬಡಜನರು ನೋಡಬೇಕೆಂದು ಅಭಿಪ್ರಾಯ ಪಟ್ಟರು.

ಮಹಿಳೆಯರ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ ಮಾತನಾಡಿದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕಿ ಎಸ್. ಮಾಲತಿಯವರು ಮಹಿಳೆಯರ ವಿಮೋಚನೆಗೆ ಪ್ರಬಲ ಸಂಘಟನೆಯೊಂದೇ ದಾರಿ ಎಂದರು. ದೌರ್ಜನ್ಯಗಳನ್ನು ವಿರೋಧಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದ ಅವರು ವಿರೋಧ ಬದುಕಿನ ಅಂಗವಾಗಬೇಕೆಂದೂ ಸಹ ಅವರು ಹೇಳಿದರು.

ಸಮಾಜವಾದಿ ಗೆಳೆಯ ರಮೇಶ್ ಬಂದಗದ್ದೆ ಮತ್ತು ಬಂಡಾಯ ಸಾಹಿತ್ಯ ಸಂಘಟನೆಯ ಕಾಳೇಗೌಡ ನಾಗವಾರ ಅವರು ಮಾತನಾಡಿ ಡಾ. ಅಂಬೇಡ್ಕರ್ ಅವರ ದಲಿತ ಸೇವೆಯನ್ನು ಕೊಂಡಾಡಿದರು. ಜಾತಿಪದ್ಧತಿ ಮತ್ತು ಬ್ರಾಹ್ಮಣ್ಯವಾದದ ವಿನಾಶಕ್ಕೆ ಅವರುಗಳು ಕರೆ ಇತ್ತರು.

ದೌರ್ಜನ್ಯ ವಿರೋಧಿ ಸಮನ್ವಯ ಸಮಿತಿಯು ಈ ಬಹಿರಂಗ ಸಭೆಯನ್ನು ವ್ಯವಸ್ಥೆ ಮಾಡಿತ್ತು. ಸಮಿತಿಯ ಸಂಚಾಲಕ ಬರಗೂರು ರಾಮಚಂದ್ರಪ್ಪ ಕಾರ್ಯಕಲಾಪಗಳನ್ನು ನಿರ್ವಹಿಸಿದರು. 'ಸಮುದಾಯದ ಗಾಯಿತ್ರಿಯವರು ವಂದಿಸಿದರು.

o

ದ.ಕ. ಜಿಲ್ಲಾ ಸಿ.ಐ.ಟಿ.ಯು. ೨ನೇ ಸಮ್ಮೇಳನ

ನಮ್ಮ ದೇಶದಲ್ಲಿನ ಬಡತನ ಮತ್ತು ನಿರುದ್ಯೋಗಕ್ಕೆ ಏಕೈಕ ಕಾರಣ ನಮ್ಮನ್ನು ಆಳಿಕೊಂಡು ಬಂದಿರುವ ಇದುವರೆಗಿನ ಸರ್ಕಾರಗಳ ಆರ್ಥಿಕ ನೀತಿಗಳೇ ಆಗಿವೆ ಎಂದು ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಅವರು ಹೇಳಿದರು.

ಮಂಗಳೂರು ನಗರದ ಬೋಳಾರದಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಹಂಚಿನ ಮಜೂರರ ಸಂಘದ ಕಟ್ಟಡದಲ್ಲಿ ಏಪ್ರಿಲ್ 7 ರಂದು ಆರಂಭವಾದ ಮೂರು ದಿವಸಗಳ ದ. ಕ. ಜಿಲ್ಲಾ ದ್ವಿತೀಯ ಸಮ್ಮೇಳನವನ್ನು ಉದ್ಘಾಟಿಸಿ ಕಾಂ. ನಂಜುಂಡಪ್ಪ ಮಾತನಾಡುತ್ತಿದ್ದರು.

ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಇದುವರೆಗಿನ ಕೇಂದ್ರ ಸರ್ಕಾರವು, ಬಂಡವಾಳಶಾಹಿ ವ್ಯವಸ್ಥೆಯಿಂದ ಉಂಟಾಗಿರುವ ಸಂಕಷ್ಟಗಳನ್ನು ದುಡಿಯುವ ಜನತೆಯ ಮೇಲೆ ಹೇರುತ್ತಿದೆ ಎಂದು ನುಡಿದ ಸಿ. ಐ. ಟಿ.ಯು ಕಾರ್ಯದರ್ಶಿಗಳು ಜನ ಪ್ರತಿಭಟಿಸಿದಾಗ ಸರ್ಕಾರವು ತುರ್ತುಪರಿಸ್ಥಿತಿ ತಂದು ತಾತ್ಕಾಲಿಕವಾಗಿ ಜನತೆಯ ಬಾಯಿ ಮುಚ್ಚಿಸಲು ಪ್ರಯತ್ನ ಮಾಡಿದ್ದನ್ನು ಜ್ಞಾಪಿಸಿಕೊಟ್ಟರು.

22 ಮಂದಿ ಮಹಿಳಾ ಪ್ರತಿನಿಧಿಗಳೂ ಸೇರಿದಂತೆ ಒಟ್ಟು 139 ಪ್ರತಿನಿಧಿಗಳು ಭಾಗವಹಿಸಿದ್ದ ಕಾರ್ಮಿಕ ಸಮ್ಮೇಳನಕ್ಕೆ ಸ್ಪಷ್ಟ ಮಾತುಗಳಲ್ಲಿ ಹೇಳಿದರು : "ಎಲ್ಲಾ ಕಾರ್ಮಿಕ ಸಂಘಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಾಗಬೇಕು. ಕಾರ್ಮಿಕ ವರ್ಗದ ಹಿತರಕ್ಷಣೆಗೆ ಹೋರಾಟವಲ್ಲದೆ ಅನ್ಯ ಮಾರ್ಗವಿಲ್ಲ" ಎಂದೂ ಸಹ ಕಾಂ. ನಂಜುಂಡಪ್ಪ ನುಡಿದರು.

ದ. ಕ. ಜಿಲ್ಲಾ ವೀವರ್ಸ್ ಯೂನಿಯನ್ ಅಧ್ಯಕ್ಷ ಕಾಂ. ಕೆ. ತಿಮ್ಮಪ್ಪ ಅವರು ಧ್ವಜಾರೋಹಣ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಪಿ. ರಾಮಚಂದ್ರರಾವ್ ಸ್ವಾಗತಿಸಿದರು.

ಸೌಹಾರ್ದ ಪ್ರತಿನಿಧಿಗಳಾಗಿ ಭಾಗವಹಿಸಿದ್ದ ಮಂಗಳೂರಿನ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕ ಕಾಂ. ಎಂ. ಲೋಕಯ್ಯ ಶೆಟ್ಟಿ, ದ. ಕ. ಜಿಲ್ಲಾ ಎ. ಐ. ಟಿ. ಯು ಸಿ ಕಾರ್ಯದರ್ಶಿ ಕಾಂ ಉಮಾನಾಥ್‌ನಾಯಕ್, ದ. ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ. ಜನಾರ್ದನ ನಾಯಕ್. ಬೆಳಗಾಂನ ಇಂಡಿಯನ್ ಅಲ್ಯೂಮಿನಿಯಂ ಕಂಪೆನಿ ವರ್ಕರ್ಸ್ ಯೂನಿಯನ್ನಿನ ಸಹ ಕಾರ್ಯದರ್ಶಿ ಕಾಂ. ಉಣ್ಣಿತ್ತಾನ್ ಅವರುಗಳು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ನಿರ್ಣಯಗಳು :

ಸಮ್ಮೇಳನವು ಹಲವಾರು ನಿರ್ಣಯಗಳನ್ನು ಅಂಗೀಕರಿಸಿದ್ದು ಮುಖ್ಯ ನಿರ್ಣಯಗಳು ಇಂತಿವೆ.

1. ಹೆಂಚಿನ ಕೈಗಾರಿಕೆಯ ಕನಿಷ್ಟ ವೇತನವನ್ನು ಕೂಡಲೇ ಪರಿಷ್ಕರಿಸಬೇಕು. ಈಗ ಮಂಗಳೂರಿನಲ್ಲಿ ದೊರೆಯುವ ವೇತನದ ಆಧಾರದಲ್ಲಿ ಪರಿಷ್ಕರಣ ಆಗಬೇಕು.

2. ಬೀಡಿ ಕೈಗಾರಿಕೆಯ ಹೊಗೆಸೊಪ್ಪಿನ ಮೇಲಿನ ತೆರಿಗೆಯನ್ನು ರದ್ದುಮಾಡಿ ಬೀಡಿಯ ಮೇಲೆ ತೆರಿಗೆ ಹಾಕಿದ್ದರಿಂದ ಈ ಕೈಗಾರಿಕೆ ಅಸಂಘಟಿತವಾಗಿ ಮಜೂರರು ದೀರ್ಘ ಕಾಲದ ಹೋರಾಟದಿಂದ ಪಡೆದ ಸವಲತ್ತುಗಳು ಸಿಗದಿರುವ ಪರಿಸ್ಥಿತಿಯು ಕಂಡುಬರುವುದರಿಂದ ಮೊದಲಿನಂತೆ ಹೊಗೆಸೊಪ್ಪಿನ ಮೇಲೆ ತೆರಿಗೆ ಹಾಕಬೇಕೆಂದು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

3. ನೈಗೆ ಕೈಗಾರಿಕೆಗೆ ಕಡಿಮೆ ದರದಲ್ಲಿ ಕಚ್ಚಾ ಮಾಲನ್ನು ಒದಗಿಸಬೇಕು.

4. ಗೋಡಂಬಿಯು ರಾಜ್ಯದಿಂದ ಹೊರಗೆ ಹೋಗುವುದನ್ನು ಸರ್ಕಾರ ತಡೆಯಬೇಕು. ಗೋಡಂಬಿ ಕೈಗಾರಿಕೆಯ ಕನಿಷ್ಟ ವೇತನವನ್ನು ಕೂಡಲೇ ಪರಿಷ್ಕರಿಸಬೇಕು.

5. ಬಂದರು ಕೆಲಸಗಾರರಿಗೆ ಕಾನೂನು ಸವಲತ್ತು ಸಿಕ್ಕಬೇಕು.

6. ಕೃಷಿಕೂಲಿಗಾರರ ಕನಿಷ್ಟ ವೇತನವನ್ನು ಕೂಡಲೇ ಪರಿಷ್ಕರಿಸಬೇಕು.

7. ಮೂರ್ತೆದಾರರಿಗೆ (ಹೆಂಡ ಇಳಿಸುವವರು) ಅವಘಾತ ಪರಿಹಾರ ಸವಲತ್ತು ಜಾರಿಯಾಗಬೇಕು.

(7ನೇ ಪುಟ ನೋಡಿ)

ಕೇಂದ್ರ ಮತ್ತು ರಾಜ್ಯಗಳ ಅಧಿಕಾರದ ಬಗ್ಗೆ ಇನ್ನಷ್ಟು ಮಾತುಗಳು

ಇ. ಎಂ. ಎಸ್. ನಂಬೂದಿರಿಪಾದ್

ಭಾರತದ ಸಂವಿಧಾನದ 256, 257 ಮತ್ತು 263ನೇ ವಿಧಿಗಳು ಇತ್ತೀಚೆಗೆ ತುಂಬ ವಿವಾದಾಸ್ಪದವಾಗಿದೆ.

ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಕೇರಳಕ್ಕೆ ಭೇಟಿಯಿತ್ತ ಕೇಂದ್ರದ ಸಂಪರ್ಕ ಖಾತೆ ಸಚಿವ ಸಿ. ಎಂ. ಸ್ಟೀಫನ್ ಅವರು ಸಂವಿಧಾನದ 256 ಮತ್ತು 257ನೇ ವಿಧಿಗಳ ಬಗ್ಗೆ ಗಮನ ಸೆಳೆಯಲು ಈ ಅವಕಾಶ ಉಪಯೋಗಿಸಿಕೊಂಡರು. ಅದು ರಾಜ್ಯದಲ್ಲಿ ಒಂದು ವಿವಾದವನ್ನೆಬ್ಬಿಸಿದಾಗ ಕೇರಳದ ಮುಖ್ಯಮಂತ್ರಿ ಇ. ಕೆ. ನಯನಾರ್ ಅವರು 263ನೇ ವಿಧಿಯನ್ನು ಉದಾಹರಿಸಿದರು.

ಸ್ಟೀಫನ್ನರ ವಿವರಣೆ:

ಲೋಕಸಭೆಯಲ್ಲಿ 1980ರ ಮಾರ್ಚ 25ರಂದು ವಿವರಣೆ ನೀಡುತ್ತಾ ಸ್ಟೀಫನ್ ಹೀಗೆ ಹೇಳಿದರು:

ಕೇರಳದಲ್ಲಿ ಅಲ್ಲಿನ ಮುಖ್ಯಮಂತ್ರಿಗಳು, ಕೇಂದ್ರದ ಶಾಸನವಲ್ಲದೆ ತಮ್ಮದೇ ಕಾನೂನುಗಳನ್ನು ಹೊಂದಿರುವುದಾಗಿಯೂ, ಅವುಗಳನ್ನು ಜಾರಿಗೆ ತರುವುದಾಗಿಯೂ, ಕೇಂದ್ರವು ಆ ಬಗ್ಗೆ ಅನ್ಯಥಾ ಭಾವಿಸಬಾರದೆಂದೂ ಇದರ ಬಗ್ಗೆ ಕೇಂದ್ರ ಬೇರೆ ನಿಲುವು ತೆದುಕೊಂಡರೆ ಕೊನೆಗೆ ಯಾರು ಗೆಲ್ಲುತ್ತಾರೆ ನೋಡೋಣವೆಂದೂ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ನಾನು ಅಲ್ಲಿಗೆ ಹೋದಾಗ ಈ ಪ್ರಶ್ನೆಯನ್ನು ಎತ್ತಲಾಯಿತು. ನಾನು ಈ ಬಗ್ಗೆ ಸಂವಿಧಾನದ ನಿಲುವನ್ನು ಮಾತ್ರ ವಿವರಿಸಿದೆ. ನಾನು ಕೇಂದ್ರದ ನೀತಿಯ ಬಗ್ಗೆ ಮಾತನಾಡಲಿಲ್ಲ, ನಾನು ಈ ವಿಚಾರಗಳ ಬಗ್ಗೆ ಏನೂ ಹೇಳಲಿಲ್ಲ. ಸಂಸತ್ತು ಒಂದು ಮಸೂದೆಯನ್ನು ಜಾರಿಮಾಡಿದರೆ ಅದು ದೇಶದಾದ್ಯಂತ ಅನ್ವಯವಾಗುತ್ತದೆ ಎಂದೂ ಯಾವ ರಾಜ್ಯವೂ ಇದು ತಮಗೆ ಅನ್ವಯವಾಗುವುದಿಲ್ಲ ಎಂದು ಹೇಳುವ ಹಕ್ಕನ್ನು ಪಡೆದಿಲ್ಲವೆಂದೂ ಹೇಳಿದೆ. ಇದಕ್ಕೆ ಸಂವಿಧಾನದ 256 ಮತ್ತು 257ನೇ ವಿಧಿಗಳನ್ನು ಉದಾಹರಿಸಿದೆ. ನಾನು ಕೇಂದ್ರದ ಕಾರ್ಯನಿರ್ವಾಹಕ ಅಧಿಕಾರ ಯಾವುದು ರಾಜ್ಯದ ಕಾರ್ಯನಿರ್ವಾಹಕ ಅಧಿಕಾರ ಯಾವುದು ಎಂಬುದನ್ನು ವಿವರಿಸಿದೆ. ಸಂಸತ್ತು ಅಂಗೀಕರಿಸಿದ ಮಸೂದೆಗಳನ್ನು ಜಾರಿಗೊಳಿಸುವಷ್ಟಕ್ಕೆ ಮಾತ್ರ ರಾಜ್ಯಗಳ ಕಾರ್ಯನಿರ್ವಾಹಕ ಅಧಿಕಾರ ಇರುವುದು ಎಂದು ನಾನು ಹೇಳಿದೆ."

ಹೇಳಿಕೆಯ ಸಂದರ್ಭ:

ಸಚಿವರು ತಮಗೆ ಮತ್ತು ಲೋಕಸಭೆಗೆ ಪ್ರಾಮಾಣಿಕರಾಗಿರಬೇಕಾದರೆ ಕೇರಳದ ಮುಖ್ಯಮಂತ್ರಿಗಳು ಯಾವ ಸಂದರ್ಭದಲ್ಲಿ ಈ ಹೇಳಿಕೆಗಳನ್ನು ನೀಡಿದ್ದಾರೆ ಎಂಬುದನ್ನೂ ವಿವರಿಸಬೇಕಿತ್ತು. ಕೇರಳದ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರಾದ ಚಾಂಡಿ ಮತ್ತು ವಿರೋಧ ಪಕ್ಷದ ನಾಯಕ ಕರುಣಾಕರನ್ ಮುಂತಾದ ಸ್ಟೀಫನ್ನರ ಸಹೋದ್ಯೋಗಿಗಳೇ ಸಂಸತ್ತು ಅಂಗೀಕರಿಸಿದ ಸ್ಥಾನಬದ್ಧತಾ ಮಸೂದೆಯನ್ನು ದಾಸ್ತಾನುಗಾರರು ಮತ್ತು ಕಾಳಸಂತೆಕೋರರ ವಿರುದ್ಧ ಉಪಯೋಗಿಸಬೇಕೆಂದು ಒತ್ತಾಯಿಸಿದರು. ಅದು ತಮ್ಮ ಸರ್ಕಾರದ ನೀತಿ ಅಲ್ಲವೆಂದು ಮುಖ್ಯಮಂತ್ರಿಗಳು ಘೋಷಿಸಿದರು. ನಂತರ ಅವರು (ಚಾಂಡಿ ಮತ್ತು ಕರುಣಾಕರನ್), ಸ್ಥಾನಬದ್ಧತಾ ಕಾಯ್ದೆಯನ್ನು ಜಾರಿಮಾಡದ ಕೇಂದ್ರಕ್ಕೆ ವಿಧೇಯವಾಗಿರುವುದು ಸರ್ಕಾರದ ಕರ್ತವ್ಯ ಎಂದು ಹೇಳಿದರು.

ಕಾಂಗ್ರೆಸ್ (ಐ) ನಾಯಕರ ಈ ವಾದಕ್ಕೆ ಉತ್ತರವಾಗಿ, ಕೇರಳದ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗಕ್ಕೆ ತನ್ನದೇ ಆದ ನೀತಿ ಮತ್ತು ಕಾರ್ಯಕ್ರಮಗಳು ಇವೆ ಮತ್ತು ಇದಕ್ಕೆ ಜನತೆ ಮತವನ್ನು ಹಾಕಿದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಕೇಂದ್ರದಲ್ಲಿ ಕಾಂಗ್ರೆಸ್ (ಐ) ಪಡೆದ ಜನದ ತೀರ್ಪಿನ ಹಾಗೆಯೇ ರಾಜ್ಯದಲ್ಲಿ ಜನತೆಕೊಟ್ಟ ಈ ತೀರ್ಪೂ ಪವಿತ್ರವಾದುದು. ಇದು ದಾಸ್ತಾನುಗಾರರು ಮತ್ತು ಕಾಳಸಂತೆಕೋರರನ್ನು ಉಗ್ರವಾಗಿ ಪ್ರತಿರೋಧಿಸಬೇಕು ಎಂದು ಕೊಟ್ಟಿರುವ ಮತವಾದರೂ, ಅದನ್ನು ನಡೆಸಲು ಕಾನೂನಲ್ಲದ ಕಾನೂನಾದ ಸ್ಥಾನಬದ್ಧತೆಯನ್ನು ಪ್ರಯೋಗಿಸಬೇಕು ಎಂದೇನೂ ಇಲ್ಲ.

ಇರುವ ವಿಚಾರ:

ಆದ್ದರಿಂದ ಸ್ಟೀಫನ್ ಅವರು ತಾವು ನೀತಿಯ ಪ್ರಶ್ನೆಯನ್ನು ಎತ್ತಿಲ್ಲ ಎಂದು ಅರೆನಿಜ ಹೇಳಿರುವುದು ನಿಜಕ್ಕೆ ವಿರೋಧವಾದುದೇ. ಕೇರಳದಲ್ಲಿ ಸದ್ಯಕ್ಕಿರುವ ಪರಿಸ್ಥಿತಿಯಲ್ಲಿ ಸ್ಥಾನಬದ್ಧತೆಗೆ ಅವಕಾಶಗಳನ್ನು ಬಳಸಬಹುದೇ ಬೇಡವೆ ಎನ್ನುವುದೇ ಇಲ್ಲಿರುವ ವಿಚಾರ.

ಕೇರಳ ಸರ್ಕಾರದ ಪ್ರಕಾರ, ಕಾಳಸಂತೆ, ದಾಸ್ತಾನು ಮತ್ತಿತರ ಸಾಮಾಜಿಕ-ಆರ್ಥಿಕ ಅಪರಾಧಗಳಿಗೆ ಈ ರೀತಿ ಕ್ರಮ ಕೈಗೊಳ್ಳಬೇಕು.

(a) ಸಮಾಜ ವಿರೋಧಿ ಅಂಶಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಜನತೆ ಮತ್ತು ಅವರ ಸಂಘಟನೆಗಳೂ ಭಾಗವಹಿಸುವಂತೆ ಮಾಡುವುದು, ಅಕ್ರಮದಾಸ್ತಾನು ವಿರೋಧಿ ಚಳುವಳಿಯನ್ನು ನಡೆಸುವುದು.

(b) ಒಂದು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರಬರಾಜನ್ನು ಉತ್ತಮಗೊಳಿಸಿ ಕ್ರಮಗೊಳಿಸುವುದು.

ಮೊದಲನೆಯದನ್ನು ಸರ್ಕಾರ ಮತ್ತು ಇತರ ಅನಧಿಕೃತ ಏಜೆನ್ಸಿಗಳು ನಡೆಸಬಹುದು. ಆದರೆ ಎರಡನೆಯದರಲ್ಲಿ ರಾಜ್ಯದ ವ್ಯವಸ್ಥೆಯ ಸುಧಾರಣೆಯಲ್ಲದೆ, ಕೇಂದ್ರದಿಂದ ಹೆಚ್ಚು ಸರಬರಾಜೂ ಬರಬೇಕಾಗುತ್ತದೆ. ಈ ಸಿದ್ಧತೆಗಳಿಲ್ಲದಿದ್ದರೆ, ಸ್ಥಾನಬದ್ಧತಾ ಕಾಯಿದೆಯ ಪ್ರಯೋಗವು ಕಿಂಚಿತ್ತೂ ಪ್ರಯೋಜನಕಾರಿಯಾಗುವುದಿಲ್ಲವೆಂದು ರಾಜ್ಯಸರ್ಕಾರ ಅಭಿಪ್ರಾಯಪಡುತ್ತದೆ. ಅಲ್ಲದೆ ಹಿಂದಿನ ಎಲ್ಲ ಸ್ಥಾನಬದ್ಧತಾ ಕಾಯಿದೆಗಳಂತೆ ಇದನ್ನೂ ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆಗಳಿವೆ.

ನೀತಿಯ ವಿಚಾರ:

ಕಾಳಸಂತೆ ಮತ್ತು ಅಕ್ರಮದಾಸ್ತಾನಿಗೆ, ಸ್ಥಾನಬದ್ಧತೆಯೊಂದೇ ಅಲ್ಲದಿದ್ದರೂ, ಅದೇ ಮುಖ್ಯ ಪರಿಹಾರ ಎಂದು ರಾಜ್ಯದ ಮತ್ತು ಹೊರಗಿನ ಕಾಂಗ್ರೆಸ್ (ಐ) ಮುಖಂಡರು ಆಲೋಚಿಸುತ್ತಾರೆ. ಆದ್ದರಿಂದ ಇದು, ನೀತಿಯ ವಿಚಾರದಲ್ಲಿ ಕೇಂದ್ರದೊಡನೆ ರಾಜ್ಯವು ಭಿನ್ನಾಭಿಪ್ರಾಯ ಹೊಂದುವ ಪ್ರಶ್ನೆ. ಈ ಎರಡು ನೀತಿಗಳಲ್ಲಿ ಯಾವುದು ಸರಿ-ಇದು ನ್ಯಾಯಬದ್ಧ ಸಂವಿಧಾನಾತ್ಮಕ ಪ್ರಶ್ನೆ ಅಲ್ಲ ರಾಜಕೀಯ–ಸಂವಿಧಾನಾತ್ಮಕ ಪ್ರಶ್ನೆ.

1968ರಲ್ಲೂ ಇದೇ ತರದ ಪರಿಸ್ಥಿತಿ ಬಂದಿತ್ತೆಂಬುದು ನನಗೆ ನೆನಪಿದೆ. ಒಂದು ದಿನದ ಮುಷ್ಕರಕ್ಕೆ ಕರೆನೀಡಿದ್ದ ಕೇಂದ್ರ ಸರ್ಕಾರಿ ನೌಕರರ ಮುಖಂಡರಿಗೆ ಸ್ಥಾನಬದ್ಧತಾ ಕಾಯಿದೆಯನ್ನು ಪ್ರಯೋಗಿಸುವ ಅಗತ್ಯದ ಬಗ್ಗೆ ಆಗ ಭಿನ್ನಾಭಿಪ್ರಾಯ ಏರ್ಪಟ್ಟಿತ್ತು. ರಾಜ್ಯ ಸರ್ಕಾರ ಈ ಕಾಯಿದೆಯನ್ನು ಪ್ರಯೋಗಿಸುವುದಿಲ್ಲವೆಂಬ ನಿಲುವು ತಳೆದಾಗ, ಗೃಹ ಶಾಖೆಯು ರಾಜ್ಯ ಸರ್ಕಾರದ ಬಗ್ಗೆ ಕೋಪ ತಳೆದಿತ್ತು. ಸ್ಟೀಫನ್ ಅವರು ಉದಾಹರಿಸುತ್ತಿರುವ ಸಂವಿಧಾನ ವಿಧಿಗಳ (256 ಮತ್ತು 257) ಬಗ್ಗೆಯೇ ಆಗ ಗಮನ ಸೆಳೆಯಲಾಗಿತ್ತು.

ಸಾರ್ವಜನಿಕ ಚರ್ಚೆ ಇದರ ಬಗ್ಗೆ ನಡೆಯುತ್ತಿದ್ದಾಗಲೇ "ಕೆಲವು ಅಥವಾ ಎಲ್ಲ ರಾಜ್ಯಗಳು ಅಥವಾ ಕೇಂದ್ರ ಮತ್ತು ಒಂದು ಅಥವಾ ಹೆಚ್ಚು ರಾಜ್ಯಗಳ" ನಡುವೆ ವಿವಾದಗಳು ಏರ್ಪಟ್ಟಾಗ ಅಂತರರಾಜ್ಯಸಮಿತಿಯನ್ನು ರಚಿಸುವ ಅವಕಾಶ ನೀಡುವ 263ನೇ ವಿಧಿಯನ್ನು ರಾಜ್ಯ ಸರ್ಕಾರ ಉದಾಹರಿಸಿತ್ತು. ಇದೇ 263ನೇ ವಿಧಿಯನ್ನೇ ಕೇರಳದ ಮುಖ್ಯಮಂತ್ರಿ ನಯನಾರ್ ಎತ್ತಿ ಹೇಳಿದ್ದಾರೆ.

ನ್ಯಾಷನಲ್ ಹೆರಾಲ್ಡ್‌ನ ಆಕ್ಷೇಪಣೆ:

ಕಾಂಗ್ರೆಸ್ (ಐ) ನ ಮುಖವಾಣಿಯಾದ ನ್ಯಾಷನಲ್ ಹೆರಾಲ್ಡ್ ಸಂಪಾದಕೀಯದಲ್ಲಿ ಇದನ್ನು ಆಕ್ಷೇಪಿಸಿದೆ:

"ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ರಾಜಕೀಯ ಪಕ್ಷ ಇಲ್ಲದಿದ್ದರೂ ಇದುವರೆಗೆ ಅಂಥ ವೇದಿಕೆಯ ಅಗತ್ಯ ಬಿದ್ದಿಲ್ಲ. ಅಂಥ ವೇದಿಕೆಯ ರಚಿತವಾದರೂ ಕೇಂದ್ರ ಮತ್ತು ರಾಜ್ಯಗಳ ಅಥವಾ ಎರಡು ರಾಜ್ಯಗಳ ನಡುವಿನ ವಿವಾದಗಳು ಪರಿಹಾರವಾಗುತ್ತವೆ ಎಂದೇನೂ ಇಲ್ಲ. ನಷ್ಟ ಹೊಂದಿದ ಕಡೆಯವರು ನ್ಯಾಯಾಲಯಕ್ಕೆ ಹೋಗಲು ಇಚ್ಛಿಸಬಹುದು".

ಈ ಮೇಲೆ ಹೇಳಿದ ಅಂಶಗಳಿಂದ, "ಇದುವರೆಗೆ ಅಂಥ ವೇದಿಕೆಯ ಅಗತ್ಯ ಬಿದ್ದಿಲ್ಲ" ಎಂದು ನ್ಯಾಷನಲ್ ಹೆರಾಲ್ಡ್ ಹೇಳಿರುವುದು ಸತ್ಯದೂರವಾದದ್ದೆಂದು ಗೊತ್ತಾಗುತ್ತದೆ. ಅದರ ಅಗತ್ಯವನ್ನು ಹಿಂದೆ ಮನಗಂಡು ಆ ಬಗ್ಗೆ ಸಲಹೆಯನ್ನೂ ಮಾಡಲಾಗಿತ್ತು. ಒಳ್ಳೆಯ ತೀರ್ಮಾನಗಳು ರೂಪಿತವಾಗಿ, ಕೇಂದ್ರವು 256 ಮತ್ತು 257ನೇ ವಿಧಿಗಳಿಗೆ ಒತ್ತುಕೊಡಲಿಲ್ಲವಾದಕಾರಣ ಅದನ್ನು ಮುಂದುವರೆಸಲಿಲ್ಲ.

ಇಲ್ಲಿನ ಪ್ರಶ್ನೆ ಎಂದರೆ: ಕೇಂದ್ರ ಸರ್ಕಾರಿ ನೌಕರರನ್ನು ವಿಚಾರಣೆ ಇಲ್ಲದೆ ಸ್ಥಾನಬದ್ಧತೆಯಲ್ಲಿಡುವಂತೆ ಒತ್ತಾಯಿಸಿದ ಹಿಂದಿನ ಇಂದಿರಾಗಾಂಧಿ ಸರ್ಕಾರಕ್ಕಿಂತ ಇಂದಿನ ಕೇಂದ್ರ ಸರ್ಕಾರ ಮುಂದುವರೆಯುತ್ತದೆಯೆ ಎಂಬುದು. ಸ್ಥಾನಬದ್ಧತಾ ಕಾಯಿದೆಯ ಪ್ರಕಾರ ಇಂಥಿಂಥವರನ್ನು ಬಂಧನದಲ್ಲಿಡಬೇಕೆಂದು ಅವರು ರಾಜ್ಯ ಸರ್ಕಾರಗಳಿಗೆ ಆದೇಶ ಕಳಿಸುತ್ತಾರೆಯೆ? ಸ್ಟೀಫನ್ ಅವರು ಹೇಳಿರುವುದು ಇದನ್ನೇನ?

ಸಂವಿಧಾನಾತ್ಮಕ ಅವಕಾಶಗಳು:

ಸಂವಿಧಾನದ ಭಾಗ ಹನ್ನೊಂದು ಅಧ್ಯಾಯ ಎರಡರ ರಾಜ್ಯ ಮತ್ತು ಕೇಂದ್ರದ ಸಂಬಂಧಗಳ ವಿವರಗಳ ಬಗ್ಗೆ ಮಾನ್ಯ ಸಚಿವರು ಮತ್ತು ನ್ಯಾಷನಲ್ ಹೆರಾಲ್ಡ್‌ನ ಸಂಪಾದಕರ ಗಮನ ಸೆಳೆಯೋಣ. ಈ ಭಾಗವನ್ನು ಎರಡು ಅಧ್ಯಾಯಗಳಾಗಿ ಎಂದರೆ ಶಾಸಕಾಂಗ ಸಂಬಂಧಗಳು ಮತ್ತು ಆಡಳಿತ ಸಂಬಂಧಗಳಾಗಿ ವಿಭಾಗಿಸಲಾಗಿದೆ. ಎರಡನೇ ಅಧ್ಯಾಯದ (ಆಡಳಿತ ಸಂಬಂಧಗಳು) ಮೊದಲನೇ ವಿಧಿ 256ನೆಯದು ಮತ್ತು ಕೊನೆಯದು 263ನೇ ವಿಧಿ. ಸ್ಟೀಫನ್ ಅವರು ಮತ್ತು ಕೇರಳದ ಮುಖ್ಯಮಂತ್ರಿಗಳು ಉಲ್ಲೇಖಿಸಿದ ಎರಡು ವಿಧಿಗಳೂ ಪರಸ್ಪರ ಸಂಬಂಧ ಪಡೆದಿವೆ. ಮತ್ತು ಎರಡೂ ಆಡಳಿತ ಸಂಬಂಧಗಳಿಗೆ ಸಲ್ಲುವಂಥವು.

256 ಮತ್ತು 257ನೇ ವಿಧಿಗಳೆರಡೂ ಕೇಂದ್ರ ಮತ್ತು ರಾಜ್ಯಗಳ ಕಾರ್ಯನಿರ್ವಾಹಕ ಅಧಿಕಾರಗಳ ಪರಸ್ಪರ ಸಂಬಂಧಗಳನ್ನು ಕುರಿತದ್ದು. "ಸಂಸತ್ತು ಅಂಗೀಕರಿಸಿದ ಕಾನೂನುಗಳು ಮತ್ತು ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನುಗಳ ಸೌಹಾರ್ದದ" ಬಗ್ಗೆ ಮಾತ್ರ ಕೇಂದ್ರವು ರಾಜ್ಯಗಳಿಗೆ ಆದೇಶಗಳನ್ನು ನೀಡತಕ್ಕದ್ದು. ರಾಜ್ಯಗಳನ್ನು ಕುರಿತು ಹೇಳುವುದಾದರೆ, ಅವು ಕೇಂದ್ರದ ಕಾರ್ಯನಿರ್ವಾಹಕ ಅಧಿಕಾರವನ್ನು ಮೀರದ ಹಾಗೆ ತಮ್ಮ ಅಧಿಕಾರವನ್ನು ಚಲಾಯಿಸತಕ್ಕದ್ದು. ಬೇರೆ ಮಾತಿನಲ್ಲಿ ಹೇಳುವುದಾದರೆ ಕೇಂದ್ರ ಸಂಪರ್ಕ ಸಚಿವರು ಉಲ್ಲೇಖಿಸಿದ ಎರಡು ವಿಧಿಗಳೂ ಕೇಂದ್ರ ಮತ್ತು ರಾಜ್ಯಗಳ ಆಡಳಿತ ಸೀಮಾವಲಯವನ್ನು ಕುರಿತದ್ದು.

263ನೇ ವಿಧಿಯ ಪ್ರಯೋಗವಲಯ:

ಕಾರ್ಯನಿರ್ವಾಹಕ ಅಧಿಕಾರಗಳನ್ನುಳ್ಳ ಎರಡು ಸಮಾನಾಂತರ ಶಕ್ತಿಗಳು ತಮ ಕಾರ್ಯಸೀಮೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಕೇಂದ್ರ ಮತ್ತು ರಾಜ್ಯಗಳು ವಿಭಿನ್ನ ರಾಜಕೀಯ ಪಕ್ಷಗಳಿಗೆ ಸೇರಿದ್ದು, ವಿಭಿನ್ನ ರಾಜಕೀಯ ದೃಷ್ಟಿಕೋನ ಹೊಂದಿರುವಾಗ ಅವುಗಳ ನಡುವೆ ಘರ್ಷಣೆ ಏಳುವುದು ಸಹಜವೇ. 1968ರಲ್ಲಿ ಕೇರಳದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ಸಂಯುಕ್ತ ಸರ್ಕಾರ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಹೀಗೆ ಆಗಿತ್ತು. ಈಗ ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳಲ್ಲಿ ಎಡ, ಎಡ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರಗಳು, ಕೇಂದ್ರದಲ್ಲಿ ಕಾಂಗ್ರೆಸ್ (ಐ) ಸರ್ಕಾರ ಇರುವಾಗಲೂ ಹೀಗೆ ಆಗುತ್ತಿದೆ.

ಈ ಎರಡು ಸಂದರ್ಭಗಳಲ್ಲೂ ಸ್ಥಾನಬದ್ಧತೆಯ ಬಗ್ಗೆಯೇ ಭಿನ್ನಾಭಿಪ್ರಾಯ ಏರ್ಪಟ್ಟಿರುವುದರಿಂದ, ಬೇರೆ ಭಿನ್ನಾಭಿಪ್ರಾಯಗಳ ಬಗ್ಗೆ ಮುಂದೆ ಘರ್ಷಣೆ ಏಳಲಾರದೆಂದೇನೂ

(5ನೇ ಪುಟ ನೋಡಿ)

ಭಾರತಕ್ಕೆ ಅರಾಫತ್ ಭೇಟಿ:

ಇಂಡೋ-ಅರಬ್ ಮೈತ್ರಿಯ ಮತ್ತೊಂದು ಹೆಜ್ಜೆ

ಪ್ಯಾಲೆಸ್ಟೈನ್ ವಿಮೋಚನಾ ರಂಗದ ಛೇರ್ಮನ್ ಯಾಸೆರ್ ಅರಾಫತ್ ಭಾರತಕ್ಕೆ ಎರಡು ದಿನಗಳ ಭೇಟಿಯಿಂದ ಭಾರತ ಮತ್ತು ಪ್ಯಾಲೆಸ್ಟೈನ್ ಜನತೆಯ ನಡುವಿನ ಸಂಬಂಧ ಮತ್ತಷ್ಟು ದೃಢವಾಗಿದೆ. ತಮ್ಮದೇ ಆದ ಸ್ವಂತ ರಾಷ್ಟ್ರವನ್ನು ಹೊಂದಲು ಹೋರಾಡುತ್ತಿರುವ ಪ್ಯಾಲೆಸ್ಟೈನ್ ಜನತೆಯೊಂದಿಗೆ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದ ಅತಿಕ್ರಮಣಕಾರಿ ಇಸ್ರೇಲಿಗಳ ವಶದಲ್ಲಿರುವ ಅರಬ್ ಪ್ರದೇಶವನ್ನು ಬಿಡುಗಡೆ ಮಾಡಲು ಹೋರಾಡುತ್ತಿರುವ ಅರಬ್ ಜನತೆ ಮತ್ತು ಭಾರತೀಯರ ಮಧ್ಯೆ ನಿಕಟ ಸ್ನೇಹ ಸಂಬಂಧಗಳು ಬಲವಾಗಲಿವೆ.

ಮಾರ್ಚಿ 28 ರಂದು ನವದೆಹಲಿಗೆ ಆಗಮಿಸಿದ ಅರಾಫತ್‌ರವರಿಗೆ ಸ್ನೇಹ, ಉತ್ಸಾಹ ತುಂಬಿದ ಸ್ವಾಗತ ನೀಡಲಾಯಿತು. ಇದಕ್ಕೆ ಮೊದಲು ತಾ. 26 ರಂದು ಭಾರತ ಸರಕಾರ ಪಿ. ಎಲ್. ಒ.ಗೆ ಪೂರ್ಣ ಮಾನ್ಯತೆಯನ್ನು ನೀಡಿತು. ಪಿ. ಎಲ್. ಒ. ಕಛೇರಿ 1975ರಿಂದಲೂ ನವದೆಹಲಿಯಲ್ಲಿದೆ.

ಪಿ. ಎಲ್. ಒ.ಗೆ ಪೂರ್ಣ ಮಾನ್ಯತೆ ನೀಡುವುದು ಹಾಗೂ ಒಂದು ದೇಶದ ಪ್ರಮುಖ ವ್ಯಕ್ತಿಗೆ ನೀಡುವ ಗೌರವವನ್ನು ಭೇಟಿಯ ಸಮಯದಲ್ಲಿ ವ್ಯವಸ್ಥೆಗೊಳಿಸಿದ್ದನ್ನು, ಹಿಂದೂ ಜಾತೀಯವಾದಿಗಳು ಹಾಗೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬಾಲಬಡುಕರನ್ನು ಬಿಟ್ಟರೆ ಉಳಿದ ಎಲ್ಲಾ ವಿಭಾಗದ ಜನತೆ ಸ್ವಾಗತಿಸಿತು.

ಭಾರತದ ತಮ್ಮ ಭೇಟಿಯ ಸಮಯದಲ್ಲಿ ಅರಾಫತ್‌ರವರು ಸರಕಾರಿ ಮಟ್ಟದಲ್ಲಿ ಪ್ರಧಾನಿ ಹಾಗೂ ವಿದೇಶಾಂಗ ಮಂತ್ರಿಗಳ ಮಾತುಕತೆ ನಡೆಸಿದ್ದಲ್ಲದೆ, ಒಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಜೊತೆಗೆ ಜಮಾತೆ-ಉಲೇಮಾ-ಇ-ಹಿಂದ್ ಹಾಗೂ 'ಪ್ಯಾಲೆಸ್ಟೈನ್ ಸ್ನೇಹಿತರು' ನೀಡಿದ ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಿದ್ದರು.

ಭಾರತ, ಅರಬ್ ಜನತೆಯ ನಡುವಣ ಪ್ರಾಚೀನ ಸಂಬಂಧಗಳನ್ನು ಪ್ರಸ್ತಾಪಿಸಿದ ಅರಾಫತ್ "ಹಿಂದಿನ ಕಾಲದಿಂದಲೂ ನಮ್ಮನ್ನು ಒಂದುಗೂಡಿಸಿರುವ ಬಾಂಧವ್ಯ ಇಂದು ಹೊಸ ತಿರುವನ್ನು ಪಡೆದಿದೆ. ಈ ನಿಮ್ಮ ಬೆಂಬಲ ಮತ್ತು ಸೌಹಾರ್ದತೆ ನಮ್ಮ ಜನತೆ ಮತ್ತು ಪಿ. ಎಲ್. ಒ. ಅನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುತ್ತಿದೆ" ಎಂದರು.

ಅರಬ್ ವಿರೋಧಿ ಕ್ಯಾಂಪ್ ಡೇವಿಡ್ ಒಪ್ಪಂದವನ್ನು ಪ್ರಸ್ತಾಪಿಸಿದ ಅವರು "ಶತ್ರು (ಇಸ್ರೇಲಿ)ಗಳು ಒಪ್ಪಂದದ ಕರಾರುಗಳನ್ನು ಜಾರಿ ಮಾಡುತ್ತಿದ್ದಾರೆ, ಇದು ನಮ್ಮ ನೆಲದ ಮೇಲೆ ಫ್ಯಾಸಿಸ್ಟ್ ದಬ್ಬಾಳಿಕೆ ನಡೆಸುವ ಕ್ರಮಕ್ಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲ" ಎಂದ ಅವರು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಲೆಬನಾನ್ ಮತ್ತು ಸಿರಿಯಾ ದೇಶಗಳ ಭದ್ರತೆಗೆ ಬೆದರಿಕೆ ಒಡ್ಡುತ್ತಿದ್ದಾರೆಂದು ಆಪಾದಿಸಿದರಲ್ಲದೆ "ಅರಬ್ ಜನತೆ ಸಂಪೂರ್ಣ ಶರಣಾಗತರಾಗಿ ತಮ್ಮ ರಾಷ್ಟ್ರೀಯ ಹಕ್ಕುಗಳನ್ನು ಬಿಟ್ಟುಕೊಡುವಂತೆ" ಮಾಡುತ್ತಿದ್ದಾರೆಂದು ದೂರಿದರು.

ಪವಿತ್ರ ಜೆರುಸಲೇಂ ನಗರ ಇಸ್ರೇಲಿಗಳ ವಶದಲ್ಲಿರುವಾಗ, ಇರಾನಿನ ಖೋಮೇನಿ ಸರಕಾರವನ್ನು ಸಾಮ್ರಾಜ್ಯವಾದಿ ಅಮೇರಿಕ ವಿರೋಧಿಸುತ್ತಿರುವಾಗ ಹಾಗೂ ಅರಬ್ ರಾಷ್ಟ್ರಗಳ ವಿರುದ್ಧ ಆಕ್ರಮಣಕ್ಕೆ ಇಸ್ರೇಲಿಗೆ ಅಮೇರಿಕಾ ಬೆಂಬಲ ನೀಡುತ್ತಿರುವಾಗ, ಅಫ್‌ಘಾನಿಸ್ತಾನದ ಮುಸ್ಲಿಮರ ಬಗ್ಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಮತ್ತು ಕೆಲವು ಮುಸ್ಲಿಂ ರಾಷ್ಟ್ರಗಳು ಮೊಸಳೆ ಕಣ್ಣೀರು ಸುರಿಸುತ್ತಿರುವುದನ್ನು ಅರಾಫತ್ ಖಂಡಿಸಿದರು.

ಮೆಡಿಟರೇನಿಯನ್ ಸಮುದ್ರ, ಮಧ್ಯಪ್ರಾಚ್ಯ ಹಾಗೂ ಹಿಂದೂ ಮಹಾಸಾಗರದಲ್ಲಿರುವ ಅಮೇರಿಕಾದ ನೌಕೆಗಳು ಶಾಂತಿಸ್ಥಾಪನೆಯ ಉದ್ದೇಶ ಹೊಂದಿಲ್ಲ, ಅವು ಹೊಸ, ಹೊಸ ಧಾಳಿಗಳನ್ನು ಇತರ ರಾಷ್ಟ್ರಗಳ ಮೇಲೆ ಎಸಗಲು ಸಜ್ಜಾಗಿವೆ ಎಂದ ಅರಾಫತ್, ಡಿಯಾಗೋ ಗಾರ್ಸಿಯಾದಲ್ಲಿರುವ ಅಮೇರಿಕಾ ನೆಲೆ ಅಣ್ವಸ್ತ್ರಗಳಿಂದ ಸಜ್ಜಾಗಿದೆ, ಇದರಿಂದ ಭಾರತಕ್ಕೂ ಅಪಾಯ ತಪ್ಪಿದ್ದಲ್ಲವೆಂದರು. ಪ್ಯಾಲೆಸ್ಟೈನ್ ಮತ್ತು ಅರಬ್ ಜನತೆ "ಯುದ್ಧ ಬೇಕಾಗಿರುವುದರಿಂದ ಹೋರಾಡುತ್ತಿಲ್ಲ. ನಮಗೆ ನಮ್ಮ ಮಾತೃಭೂಮಿಯಲ್ಲಿ ಶಾಂತಿಯ ಜೀವನಬೇಕಾಗಿದೆ ಅದಕ್ಕಾಗಿ ಹೋರಾಡುತ್ತಿದ್ದೇವೆ" ಎಂದರು.

ಭಾರತದ ಪ್ರಧಾನ ಮಂತ್ರಿ ಮತ್ತು ಪಿ. ಎಲ್. ಒ. ಛೇರ್ಮನ್ ಸಹಿ ಮಾಡಿದ ಸಂಯುಕ್ತ ಹೇಳಿಕೆಯಲ್ಲಿ ಅರಾಫತ್‌ರವರು ಪಶ್ಚಿಮ ಏಶಿಯಾದಲ್ಲಿ ಶಾಂತಿ ಮೂಡಬೇಕೆಂಬ ಭಾರತದ ಅಭಿಪ್ರಾಯ ನಿಜವಾಗಬೇಕಾದರೆ, ಸಮಾನ ಭಾಗಸ್ಥನಂತೆ ಪಿ. ಎಲ್. ಒ ಎಲ್ಲಾ ಮಾತುಕತೆಗಳಲ್ಲಿ ಭಾಗವಹಿಸಲು ಅವಕಾಶವಿರಬೇಕು. ಈ ಮಾತುಕತೆಗಳು, ಜೆರುಸಲೇಂ ನಗರವನ್ನೂ ಸೇರಿಸಿದಂತೆ, ಅರಬ್ ಮತ್ತು ಪ್ಯಾಲೆಸ್ಟೈನ್ ಪ್ರದೇಶಗಳಿಂದ ಇಸ್ರೇಲ್ ಸೈನ್ಯ ಸಂಪೂರ್ಣ ವಾಪಸು ಬರಬೇಕು, ಪ್ಯಾಲೆಸ್ಟೈನ್ ಜನತೆ ತಮ್ಮ ಮಾತೃಭೂಮಿಗೆ ಹಿಂದಿರುಗುವಂತಾಗಬೇಕು, ಸ್ವಯಂ ನಿರ್ಧಾರಿತ, ಸ್ವತಂತ್ರ ಪ್ಯಾಲೆಸ್ಟೈನ್ ದೇಶ ಅಸ್ತಿತ್ವಕ್ಕೆ ಬರಬೇಕ, ಮುಂತಾದ ಸಮಸ್ಯೆಗಳನ್ನು ಆಧರಿಸಿರಬೇಕು ಎಂದಿದ್ದಾರೆ.

ಕಳೆದ ಮೂರು ದಶಕಗಳಲ್ಲಿ ಅರಬ್ ಮತ್ತು ಪ್ಯಾಲೆಸ್ಟೈನ್ ಹೋರಾಟಗಳಿಗೆ, ಭಾರತ ಕೊಟ್ಟ ಬೆಂಬಲವನ್ನು ಪ್ರಶಂಸಿಸಿದ ಅರಾಫತ್ "ಪಿ ಎಲ್. ಒ. ಮತ್ತು ಭಾರತದ ನಡುವೆ ಮತ್ತಷ್ಟು ಸ್ನೇಹ ಸೇತುವೆಗಳನ್ನು ಕಟ್ಟುವ" ತಮ್ಮ ಆಸೆಯನ್ನು ವ್ಯಕ್ತಪಡಿಸಿದರು.

ಅರಬ್ ಜಗತ್ತಿನ ಹೊರಗೆ 105 ರಾಷ್ಟ್ರಗಳು ವಿಶ್ವಸಂಸ್ಥೆಯಲ್ಲಿ ಮಾತನಾಡುವಂತೆ ಆಹ್ವಾನಿಸಿದ್ದನ್ನು ಮನ್ನಿಸಿ 14ನೇ ನವೆಂಬರ್ 1974 ರಂದು ಅರಾಫತ್ ಭಾಷಣ ಮಾಡಿದಂದಿನಿಂದ ಪಿ. ಎಲ್. ಒ. ಅಂತರ್‌ರಾಷ್ಟ್ರೀಯ ಮಾನ್ಯತೆ ಪಡೆಯಿತು. ನಂತರ ಅನೇಕ ರಾಷ್ಟ್ರಗಳು ಮಾನ್ಯತೆ ನೀಡಿವೆ, ಇತ್ತೀಚೆಗೆ ಮಾನ್ಯತೆ ನೀಡಿದ ರಾಷ್ಟ್ರ ಭಾರತ.

ಪಿ. ಎಲ್. ಒ. ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದ ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳು ಸಹಾ ತಮ್ಮ ಧೋರಣೆಯನ್ನು ಬದಲಾಯಿಸಿಕೊಂಡಿವೆ. ನವದೆಹಲಿಯಲ್ಲಿ ಅರಾಫತ್ ಹೇಳಿದಂತೆ "ಆಸ್ಟ್ರೀಯಾ, ಸ್ಪೇನ್ ಮತ್ತು ಪೋರ್ಚುಗಲ್ ಮಾನ್ಯತೆ ನೀಡಿವೆ, ನೆದರ್‌ಲ್ಯಾಂಡ್, ಪಶ್ಚಿಮ ಜರ್ಮನಿ, ಫ್ರಾನ್ಸ್ ಮತ್ತು ಬ್ರಿಟನ್ ತಮ್ಮ ಧೋರಣೆಗಳನ್ನು ಪುನರ್ ವಿಮರ್ಶಿಸುತ್ತಿದ್ದಾರೆ. ಫ್ರಾನ್ಸಿನ ಅಧ್ಯಕ್ಷ ಗಿಸ್‌ಕಾರ್ಡ್ ಇಸ್ಟೇಂಗ್ ತಮ್ಮ ಇತ್ತೀಚಿನ ಮಧ್ಯಪ್ರಾಚ್ಯ ಭೇಟಿಯ ಸಮಯದಲ್ಲಿ ಪ್ಯಾಲೆಸ್ಟೈನ್ ಜನತೆಯ ಹೋರಾಟಕ್ಕೆ ತಮ್ಮ ಸ್ಪಷ್ಟ ಬೆಂಬಲ ವ್ಯಕ್ತಪಡಿಸಿದರು.

ಅರಾಫತ್ ದೆಹಲಿ ಭೇಟಿಯ ಸಮಯದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಸದಸ್ಯರಾದ ಬಿ ಟಿ. ರಣದಿವೆ, ಎಂ. ಬಸವಪುನ್ನಯ್ಯ, ಹರಿಕಿಶನ್‌ಸಿಂಗ್‌ಸುರ್ಜೀತ್ ಮತ್ತು ಸಮರ್ ಮುಖರ್ಜಿಯವರು ಪಿ. ಎಲ್. ಒ. ಛೇರ್ಮನ್‌ಗೆ ಭೇಟಿಯಾಗಿ ಪ್ಯಾಲೆಸ್ಟೈನ್ ಮತ್ತು ಅರಬ್ ಜನತೆಯ ಹೋರಾಟಕ್ಕೆ ಬೆಂಬಲ ಮುಂದುವರಿಸುವುದಾಗಿ ತಿಳಿಸಿದರಲ್ಲದೆ, ಹಾರ್ದಿಕ ಶುಭಾಶಯಗಳನ್ನು ಕೋರಿದರು. ತಮ್ಮ ಪಕ್ಷ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ಯಾಲೆಸ್ಟೈನ್ ಹಾಗೂ ಅರಬ್ ಜನತೆಯ ಹೋರಾಟಕ್ಕೆ ಬೆಂಬಲವನ್ನು ತೀವ್ರಗೊಳಿಸುವುದಾಗಿ ನುಡಿದರಲ್ಲದೆ ಪ್ಯಾಲೆಸ್ಟೈನ್ ಜನತೆ ತಮ್ಮ ಸ್ವಂತ ತಾಯ್ನಾಡನ್ನು ಹೊಂದುವುದನ್ನು ಹಾಗೂ ಅರಬ್ ಜನತೆ ವಿಜಯವನ್ನು ಪಡೆಯುವ ದಿನಗಳು ದೂರವಿಲ್ಲವೆಂದರು. ○

ಕೇಂದ್ರ ಮತ್ತು ರಾಜ್ಯಗಳ ಅಧಿಕಾರದ ಬಗ್ಗೆ ಇನ್ನಷ್ಟು ಮಾತುಗಳು

(4ನೇ ಪುಟದಿಂದ)

ಅಲ್ಲ. ಈ ದೃಷ್ಟಿಯಿಂದಲೇ ಅಂತರ-ರಾಜ್ಯ ಸಮಿತಿಯ ರಚನೆಗೆ 263 ವಿಧಿ ಅವಕಾಶ ಮಾಡಿಕೊಟ್ಟಿತ್ತು. ಅದಕ್ಕೆ ಕೆಳಕಂಡ ಕರ್ತವ್ಯಗಳಿದ್ದವು.

(a) ರಾಜ್ಯಗಳ ನಡುವೆ ಏಳುವ ಘರ್ಷಣೆಗಳ ಬಗ್ಗೆ ವಿಚಾರಣೆ ನಡೆಸಿ ಸಲಹೆಗಳನ್ನು ನೀಡುವುದು.

(b) ಕೆಲವು ಅಥವಾ ಎಲ್ಲ ರಾಜ್ಯಗಳಿಗೆ, ಅಥವಾ ಕೇಂದ್ರಕ್ಕೆ ಮತ್ತು ಒಂದು ಅಥವಾ ಅನೇಕ ರಾಜ್ಯಗಳಿಗೆ ಆಸಕ್ತಿಯಿರುವ ವಿಷಯಗಳ ಬಗ್ಗೆ ಕೂಲಂಕಷ ವಿಚಾರಣೆ ನಡೆಸಿ ಚರ್ಚಿಸುವುದು. ಅಥವಾ

(c) ಅಂಥ ವಿಷಯಗಳ ಬಗ್ಗೆ ಶಿಫಾರಸುಗಳನ್ನು ಮಾಡುವುದು ಮತ್ತು, ಆ ವಿಷಯದ ಬಗ್ಗೆ ನೀತಿಯ ಉತ್ತಮ ಸಮನ್ವಯ ಮತ್ತು ಕಾರ್ಯಾಚರಣೆ ನಡೆಯುವುದಕ್ಕೆ ಶಿಫಾರಸುಗಳನ್ನು ಮಾಡುವುದು.

1968ರಲ್ಲಿ ಕೇರಳ ಒತ್ತಾಯಿಸಿದಂತೆ ಮತ್ತು ಈಗ ಮತ್ತೆ ಒತ್ತಾಯಿಸಿದಂತೆ ಅಂತರರಾಜ್ಯ ಸಮಿತಿಯನ್ನು ನೇಮಿಸಿದರೆ, ನ್ಯಾಷನಲ್ ಹೆರಾಲ್ಡ್ ಹೇಳಿದಂತೆ, ಕೇಂದ್ರ ಮತ್ತು ರಾಜ್ಯಗಳ ನಡುವೆ ಇರುವ ಎಲ್ಲ ಭಿನ್ನಾಭಿಪ್ರಾಯಗಳೂ ಸರಿಹೊಂದುತ್ತವೆಯೇ ಎಂಬ ಪ್ರಶ್ನೆ ಇಲ್ಲಿಲ್ಲ. ಸಂವಿಧಾನದಲ್ಲಿ ನೀಡಿರುವ ಅವಕಾಶಗಳನ್ನು ಕೇಂದ್ರವು ಬಳಸಿಕೊಳ್ಳುತ್ತದೆಯೋ ಇಲ್ಲವೋ ಎಂಬ ಪ್ರಶ್ನೆ ಇಲ್ಲಿದೆ. 263ನೇ ವಿಧಿಯ ಪ್ರಕಾರ ಭಿನ್ನಾಭಿಪ್ರಾಯಗಳನ್ನು ಪರಿಹರಿಸದೆ, 256 ಮತ್ತು 257ನೇ ವಿಧಿಗಳನ್ನು ಕೇರಳ ಮುಖ್ಯಮಂತ್ರಿಗಳ ಮೇಲೆ ಪ್ರಯೋಗಿಸುವುದು ಸಂವಿಧಾನಕ್ಕೆ ಗೌರವ ತಂದುಕೊಡುತ್ತದೆಯೇ ಎಂಬುದು ಪ್ರಶ್ನೆ. ವಿಶಿಷ್ಟ ಸನ್ನಿವೇಶಗಳಲ್ಲಿ 256 ಮತ್ತು 257ನೇ ವಿಧಿಗಳ ಮೂಲಕ ಕೇರಳ ಸರ್ಕಾರವನ್ನು ಬೆದರಿಸುತ್ತಿರುವ ಸ್ಟೀಫನ್ ಅವರು ಸಂವಿಧಾನದ ಚೇತನಕ್ಕೆ ವಿರುದ್ಧವಾಗಿ ಹೋಗುತ್ತಿದ್ದಾರೆ ಎಂಬುದು ನಮ್ಮ ಅನ್ನಿಸಿಕೆ.

ಅಸಮರ್ಥನೀಯ ನಿಲುವು:

ಕೇರಳದ ವಿಶಿಷ್ಟ ಪರಿಸರದಲ್ಲಿ ಸ್ಥಾನಬದ್ಧತೆಯನ್ನು ಅವಲಂಬಿಸಬೇಕೆ ಎನ್ನುವುದು ಕಾನೂನು ಅಥವಾ ಸಂವಿಧಾನದ ಪ್ರಶ್ನೆ ಅಲ್ಲ. ಇಂದಿರಾಗಾಂಧಿ ಸರ್ಕಾರ ಮತ್ತು ನಯನಾರ್ ಸರ್ಕಾರವೂ ಸೇರಿದಂತೆ ಇರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರಗಳಿಗೆ ಇರುವ ಮೂಲಭೂತ ಭಿನ್ನಾಭಿಪ್ರಾಯದ ಪ್ರಶ್ನೆ. ಯಾರ ಮೇಲೆ ಪ್ರಯೋಗಿಸಬೇಕು ಎಂಬುದನ್ನು ಕಾರ್ಯನಿರ್ವಾಹಕ ಅಧಿಕಾರದ ತೀರ್ಮಾನಕ್ಕೇ ಬಿಡಬೇಕಾಗಿರುವ ಕಾಯಿದೆ ಸ್ಥಾನಬದ್ಧತೆ. ಇದನ್ನು ನಡೆಸಬಾರದೆಂಬ ತೀರ್ಮಾನವನ್ನು ಕೈಗೊಳ್ಳುವುದೂ ರಾಜ್ಯದ ಅಧಿಕಾರಕ್ಕೆ ಸೇರಿದ್ದು. (1968ರಲ್ಲಿ ಕೇರಳ ಸರ್ಕಾರ ತೀರ್ಮಾನಿಸಿದ್ದು ಹೀಗೆ. ಇವತ್ತು ಮೂರು ವಾಮಪಂಥೀಯ ಸರ್ಕಾರಗಳೂ ಇದರ ಪ್ರಯೋಗವನ್ನು ನಡೆಸುತ್ತಿಲ್ಲ. ಕೇಂದ್ರ ಸರ್ಕಾರ ಈ ಕಾಯಿದೆಯನ್ನು ಪಾಲಿಸಬೇಕೆಂದು ಹೇಳುತ್ತಿದೆ. ಇಲ್ಲಿ 263ನೇ ವಿಧಿಯ ಪರಿವೀಕ್ಷಣೆ ಬರುವಂಥ ಸನ್ನಿವೇಶ ಇದೆ.

ಈ ಮೂರು ಸರ್ಕಾರಗಳ ನಿಲುವನ್ನು ವಿರೋಧಿಸುತ್ತಿರುವವರು ರಾಜ್ಯ ಸರ್ಕಾರಗಳಿಗೆ ಮುನ್ಸಿಪಾಲಿಟಿಗಳು ಮತ್ತು ಪಂಚಾಯಿತಿಗಳಿಗಿಂತ ಹೆಚ್ಚು ವಿಶಾಲವಾದ ಅಧಿಕಾರವಿದೆಯೆಂಬುದನ್ನು ಒಪ್ಪಿಕೊಳ್ಳಬೇಕಷ್ಟೆ. ಜನವರಿ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪಡೆದ "ಅಪಾರ ಮತಗಳಲ್ಲಿ" ಈ ಮೂರು ರಾಜ್ಯಗಳು, ತಮಿಳುನಾಡು, ಜಮ್ಮು ಮತ್ತು ಕಾಶ್ಮೀರ ಮತ್ತು ಇಡೀ ಈಶಾನ್ಯ ವಲಯಗಳು ಸೇರಿಲ್ಲವೆಂಬುದನ್ನೂ ಒಪ್ಪಿಕೊಳ್ಳಬೇಕು. ಅದ್ದರಿಂದಲೇ ಅವರು ಡಿ. ಎಂ. ಕೆ., ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್‌ಫರೆನ್ಸ್ ಮುಂತಾದುವುಗಳ ಜೊತೆ ಸಹಕಾರ ಸ್ಥಾಪಿಸಿ, ಸಂಯುಕ್ತ ಸರ್ಕಾರ ರಚಿಸಲು ಯತ್ನಿಸುತ್ತಿದ್ದಾರೆ. ಆದ್ದರಿಂದ ಅವರು, ಕೆಲವು ಕಾಂಗ್ರೆಸ್ (ಐ) ವಕ್ತಾರರು ಸಲಹೆಮಾಡಿದ ರೀತಿಯಲ್ಲೇ ಕಾಂಗ್ರೆಯೇತರ ಸರ್ಕಾರಗಳನ್ನು ನಡೆಸಿಕೊಳ್ಳುವುದು ಸಮರ್ಥನೀಯವೆನಿಸುವುದಿಲ್ಲ. ●

ಕಲ್ಲುಕುಟಿಗರ ಸಂಘದ ಮಹಾಸಭೆ

ದ. ಕ. ಜಿಲ್ಲೆಯ ಮಂಜೇಶ್ವರದ ಕಲ್ಲುಕುಟಿಗರ ಸಂಘವಾದ ಚೆಂಗಲ್ ತೊಳಿಲಾಳಿ ಸಂಘದ (ಸಿ. ಐ. ಟಿ. ಯು.) ಪ್ರಥಮ ವಾರ್ಷಿಕ ಮಹಾಸಭೆಯು ಮಾರ್ಚಿ ಮೂವತ್ತರಂದು ಜರುಗಿತು.

ಸಭೆಯ ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಕಾಂ. ಕಾಘವ ಅವರು ಧ್ವಜಾರೋಹಣ ಮಾಡಿದರು. ಕಾಂ. ಬಿ. ಎಂ. ಮಾಧವ ಅವರು ಉದ್ಘಾಟಿಸಿದರು. ಕಲ್ಲುಕುಟಿಗರೆಲ್ಲರು ಒಟ್ಟಾಗಿ, ಸಂಘಟನೆಯನ್ನು ಬೆಳೆಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು. ಸಭೆಗೆ ಆಗಮಿಸಿದ್ದ ಚೆಂಗಲ್ ತೊಳಿಲಾಳಿ ಯೂನಿಯನ್, ಕಣ್ಣಾನೂರು ಜಿಲ್ಲೆಯ ಕಾಂ. ಟಿ. ರಾಮಚಂದ್ರನ್ ಅವರು ತಮ್ಮ ಸಂಘದ ಹೋರಾಟಗಳನ್ನು ವಿವರಿಸಿದರು. ನಂತರ ಏಳು ಸದಸ್ಯರ ಒಂದು ಸಮಿತಿಯನ್ನು ಚುನಾಯಿಸಲಾಯಿತು. ಕೊನೆಯಲ್ಲಿ ತಮ್ಮ ಸಂಘಕ್ಕೆ ಬೆಂಬಲ ನೀಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಜೇಶ್ವರ ಶಾಖೆಯ ಸಹಾಯವನ್ನು ಸ್ಮರಿಸಲಾಯಿತು. ●

ಪುಸ್ತಕ ಪರಿಚಯ

ಹೊಲೆಯ ಬಂದ ಹೊಲೆಯ (ನಾಟಕ) : ಲೇಖಕರು:- ಕೆ. ಹೆಚ್. ಪ್ರಭು; ಪ್ರಕಾಶಕರು : ಈಗಲ್ ಪಬ್ಲಿಕೇಶನ್ಸ್, ಕುಮಟಾ; ಪುಟಗಳು 50, ಬೆಲೆ ರೂ. 3–50

ಬೆಂಗಳೂರು ನಗರದಲ್ಲಿ ಸರ್ಕಾರಿ ಅನುದಾನ ಪಡೆಯುವ ಭಾರಿ ಕಾಲೇಜೊಂದು ಮಲ್ಲೇಶ್ವರದಲ್ಲಿದೆ. ಅದನ್ನು ನಡೆಸುವುದರಲ್ಲಿ ಸಂಪ್ರದಾಯಸ್ಥ ವಿದ್ವಾಂಸರೊಬ್ಬರ ಕೈವಾಡವಿದೆ. ಸರ್ಕಾರದ ಒಂದು ಆಜ್ಞೆಯಂತೆ ಅಧ್ಯಾಪಕರ ನೇಮಕಾತಿಯಲ್ಲಿ ನಿಮ್ನವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಕೆಲವು ಮೀಸಲು ಸ್ಥಾನಗಳಿವೆ. ಅದು ಎಲ್ಲ ಕಾಲೇಜುಗಳಿಗೂ ಅನ್ವಯವಾಗುವ ಆಜ್ಞೆ. ಆದರೆ ಮಲ್ಲೇಶ್ವರದ ಕಾಲೇಜಿನ ವಿದ್ಯಾವಿಭೂಷಣರಿಗೆ ಅನುಸೂಚಿತ ವರ್ಗಗಳ ಜನರನ್ನು ಅಧ್ಯಾಪಕರನ್ನಾಗಿ ನೇಮಿಸಿದರೆ ಕಾಲೇಜಿನ ಮತ್ತು ಅವರ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆಂಬ ಭಾವನೆ ಇರಬೇಕು. ಆದ್ದರಿಂದ ಒಂದು ಬುದ್ಧಿವಂತಿಕೆಯ ಕಳ್ಳಮಾರ್ಗ ಹಿಡಿದಿದ್ದಾರೆ. ಅದೇನೆಂದರೆ ಹುದ್ದೆಗಳನ್ನು ತುಂಬುವ ಬದಲು ಅವನ್ನೆಲ್ಲಾ ಪಾರ್ಟ್-ಟೈಂ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವುದು! ಹೀಗಾಗಿ ಒಂದು ವಿಷಯದಲ್ಲಿ 36 ಗಂಟೆಯ ಕೆಲಸಕ್ಕೆ ಇಬ್ಬರು ಪೂರ್ಣವೇಳೆಯ ಅಧ್ಯಾಪಕರನ್ನು ನೇಮಿಸುವ ಬದಲು ಅಷ್ಟನ್ನೂ ಪಾರ್ಟ್‌ಟೈಂ ಅಧ್ಯಾಪಕರಿಂದ ನಡೆಸಿಕೊಳ್ಳುತ್ತಿದ್ದಾರೆ. ಅವರ ವಿದ್ಯಾಭ್ಯಾಸದ "ಸ್ಟ್ಯಾಂಡರ್ಡ್" ಮತ್ತು ಕಾಲೇಜಿನ "ಮಡಿವಂತಿಗೆ" ಎರಡೂ ಇದರಿಂದ ರಕ್ಷಣೆ ಪಡೆದಿವೆ. ವಿಶ್ವವಿದ್ಯಾನಿಲಯ ಮತ್ತು ಸರ್ಕಾರ ಈ ಬಗ್ಗೆ ಏನೂ ಮಾಡಿಲ್ಲ. ವಿಪ್ರಶ್ರೇಷ್ಠರ ವಿರುದ್ಧ ಚಕಾರವೆತ್ತಿದರೆ ಅವರು ಶಾಪ ಹಾಕಿಬಿಟ್ಟರೆ ಏನು ಗತಿಯೆಂಬ ಹೆದರಿಕೆ ಅವರಿಗಿರಬೇಕು.

ಅದೇ ಕಾಲೇಜಿನ ವಾರ್ಷಿಕ ಕ್ರೀಡಾಕೂಟದ ಸಂದರ್ಭದಲ್ಲಿ ಕೆಲವು ಧೀಮಂತ ವಿದ್ವಾಂಸ ಅಧ್ಯಾಪಕರು ಅನುಸೂಚಿತ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ "ಜೋಕು" ಮಾಡುವುದುಂಟು. 400 ಮೀಟರ್ ಓಟದ ಸ್ಪರ್ಧೆಯಲ್ಲಿ ಹೊಲೆಯ-ಮಾದಿಗರಿಗೆ ಕನ್ಸೆಶನ್ ಕೊಟ್ಟು ಬೇರೆಯವರಿಗಿಂತಲೂ ಮುಂದೆ ನಿಲ್ಲಿಸಲ್ಪಡುತ್ತಾರೆ ತಾನೆ, ಎಂಬುದು ಆ ಜೋಕು. ಬಹುಮಾನಗಳಲ್ಲೂ ರಿಸರ್ವೇಶನ್ ಇರುತ್ತದೆ ತಾನೆ ಈ ಸರ್ಕಾರಿ ಬ್ರಾಹ್ಮಣರಿಗೆ ಎಂಬ ಇನ್ನೊಂದು ಜೋಕೂ ಪ್ರಚಾರದಲ್ಲಿರುತ್ತದೆ.

ಶತಶತಮಾನಗಳ ಶೋಷಣೆ ಹೇಗೆ ನಡೆದಿದೆಯೆಂಬುದು ತಿಳಿದಿದ್ದರೂ ಸಮಾಜದ ಕಳಂಕಗಳ ನಿವಾರಣೆಗೆ ಪಣತೊಟ್ಟು ಹೋರಾಡುವ ತವಕವಿಲ್ಲದವರು ಇಂತಹ ಅನೇಕ ಹಗುರದ ಮಾತುಗಳನ್ನು ತಮ್ಮತಮ್ಮಲ್ಲೇ ಗುಟ್ಟಾಗಿ ಆಡುತ್ತಿರುತ್ತಾರೆ. ಬಹಿರಂಗವಾಗಿ ಮಾತ್ರ ಅವರು ಯಾವಾಗಲೂ ಹಿಂದುಳಿದವರಿಗಾಗಿ ಕಣ್ಣೀರಿಡುವಂತಹವರು. ಬೇರೆಲ್ಲರಿಗಿಂತಲೂ ಸಮಾಜದ ಬದಲಾವಣೆ ಅಗತ್ಯವೆಂದು ಸಾರಿ ಹೇಳುವವರು. ಮುಖ್ಯಮಂತ್ರಿಯೊಬ್ಬರನ್ನು ಸನ್ಮಾನಿಸುವಾಗ ಭಯಂಕರ ಭಾಷಣ ಮಾಡಿ ತಮ್ಮ ಹೃದಯದಾಳದ ನೋವನ್ನು ತೋಡಿ ತೋರಿಸುವಂತಹವರು ಇಂತಹ ಕಪಟ ಉದಾರಿಗಳು ಸಮಾಜದ ಹಿತಶತ್ರುಗಳು ಎನ್ನಬೇಕು.

ಋಷಿಯ ಅಂಶವಿಲ್ಲದವನೊಬ್ಬ ಕಾವ್ಯ ರಚಿಸಲಾರನಂತೆ ಮತ್ತು ವಿಷ್ಣುವಿನ ಅಂಶವಿಲ್ಲದವ ರಾಜನಾಗಲಾರನಂತೆ. ಇದನ್ನು ಅತ್ಯಂತ ಬಿಗುಮಾನದಿಂದ ಹೇಳಿ ಸಂತಸಪಡುವ ಮಹಾ ಬ್ರಾಹ್ಮಣರು ಅಲ್ಲಲ್ಲಿ ಗುಟ್ಟಾಗಿ ಇರುತ್ತಾರೆ. ಹಿಂದೊಮ್ಮೆ ಕೆಲವು ಬ್ರಾಹ್ಮಣ ಪಂಡಿತರು ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದಾಗ ನಡೆದ ಸಂಭಾಷಣೆ ಹೀಗಿದೆ: ಮಲೆನಾಡಿನ ಶೂದ್ರರೊಬ್ಬರು ಉತ್ತಮ ಕವಿ ಮತ್ತು ಕಾದಂಬರಿಕಾರರಾಗಿ ಯಶಸ್ಸು ಪಡೆಯಲು ಅವರಲ್ಲಿರುವ ಬ್ರಾಹ್ಮಣ ಸಂತತಿಯ ಅಂಶ ಕಾರಣ, ಇದು ಒಬ್ಬರ ಅಭಿಪ್ರಾಯ. ಪ್ರತ್ಯುತ್ತರವಾಗಿ ಇನ್ನೊಬ್ಬರು ಅಂದರು: ನಿಜವೇ ಇರಬಹುದು. ಹಾಗಾದರೆ ಯಾವ ಯಶಸ್ಸನ್ನು ಪಡೆಯದ ಬ್ರಾಹ್ಮಣ ವ್ಯಕ್ತಿಗಳಿದ್ದಾರಲ್ಲ; ಅವರ ಜನ್ಮದಲ್ಲಿ ಹೇಗೋ ಶೂದ್ರ ಸಂತತಿಯ ಅಂಶ ಸೇರಿರಬೇಕೆಂದಾಯಿತಲ್ಲವೆ? – ಸಂಭಾಷಣೆ ಮುಂದುವರಿಯುವುದು ಸಾಧ್ಯವಿರಲಿಲ್ಲ!

ಸಂಸ್ಕೃತವೆಂದರೆ ಬ್ರಾಹ್ಮಣ, ಸಂಪ್ರದಾಯ, ಮಡಿವಂತಿಕೆ, ಇತ್ಯಾದಿಗಳೊಂದಿಗೆ ಗಂಟು ಸರ್ವೇಸಾಮಾನ್ಯ. ಪ್ರತಿಷ್ಠಿತ ವರ್ಗವು ಸಂಸ್ಕೃತದಲ್ಲಿರುವ ಗ್ರಂಥಗಳನ್ನು ಬಳಸಿಕೊಂಡಿರುವ ವಿಧಾನ ಅಂತಹದ್ದು. ಜನಸಾಮಾನ್ಯರ ಬಗೆಗಿನ ಪ್ರಸ್ತಾಪಗಳನ್ನೆಲ್ಲಾ ಮುಚ್ಚಿಹಾಕಿ, ಕ್ರೂರಮರ್ದನಕ್ಕೆ ಇಂಬುಕೊಟ್ಟಂತಹ ಅಂಶಗಳನ್ನು ಮರೆಮಾಚಿ, ಗೊಡ್ಡು ವೇದಾಂತದ ಸೆರಗಿನ ಹಿಂದೆ ನಿಂತು ನಮ್ಮ ಸಂಸ್ಕೃತ ಪಂಡಿತರಲ್ಲಿ ಬಹುಮಂದಿ ಇಂದಿನ ನಾಚಿಕೆಗೇಡಿನ ಆರ್ಥಿಕ-ಸಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುತ್ತಾರೆ. ಕ್ರಾಂತಿಕಾರಿ ಹೋರಾಟಕ್ಕೆ ಸಾಧನವಾಗುವಂತಹ ತತ್ವಗಳನ್ನು ಮುಚ್ಚಿಡುತ್ತಾರೆ, ಇಲ್ಲವೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಧಾರ್ಮಿಕ ಕುತಂತ್ರಗಳ ಉಗಮವಾಗುವುದೂ ಹೀಗೆಯೇ. ಇದನ್ನೆಲ್ಲಾ ಕಂಡು ರೋಸಿಹೋದ ಡಾ|| ಅಂಬೇಡ್ಕರ್ ಒಮ್ಮೆ ನುಡಿದಿದ್ದರು: "ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ, ನಿಜ; ಆದರೆ ನಾನು ಹಿಂದುವಾಗಿ ಖಂಡಿತ ಸಾಯುವುದಿಲ್ಲ".

ಹೊಲೆಯರೆಂದು ಜರಿಯಲ್ಪಟ್ಟು ತಲೆತಲಾಂತರಗಳಿಂದ ತುಳಿತಕ್ಕೆ ಸಿಕ್ಕು ಸಹಜವಾಗಿಯೇ ಅವರು ತುಚ್ಛರೆಂದು ಎಣಿಸಲ್ಪಟ್ಟಿದ್ದ ಭಾರತದ ಒಂದು ಇಡೀ ಜನಾಂಗ ನಮ್ಮ ಚರಿತ್ರೆಯ ಕರಾಳತೆಗೆ ಜೀವಂತ ಸಾಕ್ಷಿಗಳು. ಅವರನ್ನು "ಹರಿಜನ"ರೆಂದು ಕರೆದು ತೃಪ್ತಿ ಪಡೆಯುವುದು ಒಂದು ಕುಹಕ. ಸಮಾಜದ ದ್ವಂದ್ವಗಳಲ್ಲಿ ಇವರ ಸ್ಥಾನಮಾನದ ಪ್ರಶ್ನೆ ಪ್ರಮುಖವಾದದ್ದು. ಅದರ ಒಂದು ಮುಖವನ್ನು ಶ್ರೀ ಕೆ. ಎಚ್. ಪ್ರಭು ತಮ್ಮ "ಹೊಲೆಯ ಬಂದ ಹೊಲೆಯ" ನಾಟಕದಲ್ಲಿ ಪ್ರತಿಫಲಿಸಲು ಯತ್ನಿಸಿದ್ದಾರೆ. ವೇದವಾಕ್ಯದ ಶ್ರವಣವನ್ನೇನಾದರೂ ಹೊಲೆಯ ಮಾಡಿದರೆ ಅವನ ಕಿವಿಗೆ ಕಾದಸೀಸವನ್ನು ಹುಯ್ಯಬೇಕೆಂದು "ಶ್ರೇಷ್ಠ ಧರ್ಮಶಾಸ್ತ್ರಕಾರ" ಮನು ಬಡಬಡಿಸಿದ್ದಾನೆ. ಅದನ್ನು ಅನುಮೋದಿಸಿ "ಪರಮಪೂಜ್ಯ ಶಂಕರಭಗವತ್ಪಾದರು" ತಮ್ಮ ದನಿಗೂಡಿಸಿದ್ದಾರೆ. "ಸರಸಂಘ ಸಂಚಾಲಕ" ದೇವರಸ್ ಅವರು ಗಟ್ಟಿಯಾಗಿ ಅದನ್ನು ಹೇಳದಿದ್ದರೂ ಅವರಿಗೆ ಮನುವೇ ಆರಾಧ್ಯ ದೇವತೆ. ಈ ಜನದ ಜಡ್ಡು ಹಿಡಿದ ಬುದ್ಧಿಗೆ ಹೊಲೆಯ ಎಂದರೆ ಒಂದು ಅಸಹ್ಯ ಮಾನವಮೃಗ. ಈ ರೀತಿಯ ಹೇಸಿಗೆಯ ಭಾವನೆಯೊಂದಿಗೆ ಅವರಲ್ಲಿ ದುರಹಂಕಾರವೂ ಹೇರಳವಾಗಿರುತ್ತದೆ. ಅದಕ್ಕೆ ಕಾರಣ ತಾವು ಭಗವಂತನಿಂದ ಸೃಷ್ಟಿಸಲ್ಪಟ್ಟಿರುವವರಲ್ಲಿ ಅತ್ಯಂತ ಶ್ರೇಷ್ಠರು ಎಂಬ ಭ್ರಮೆ. ಅವರ ಮಾನಸಿಕ ಮತ್ತು ಬೌದ್ಧಿಕ ಜಾಡ್ಯ ಒಂದು ರೀತಿಯ ಬಂಜೆತನದ ಪ್ರತೀಕ. ಅಂತಹ ಪೂರ್ವಗ್ರಹಪೀಡಿತ ಪಂಡಿತರೊಬ್ಬರನ್ನು ನಾಟಕಕಾರರು "ಬಂಜೆ ರಾಮಾಚಾರ್ರು" ಎಂಬ ಹೆಸರಿನಲ್ಲಿ ಸೃಷ್ಟಿಸಿದ್ದಾರೆ. (ಈ ಹೆಸರಿನಿಂದ ಯಾರಾದರೂ ಒಬ್ಬ ವ್ಯಕ್ತಿಯ ಸೂಚನೆ ಓದುಗರಿಗೆ ಅಥವಾ ಪ್ರೇಕ್ಷಕರಿಗೆ ದೊರೆತರೆ ನಾಟಕಕಾರರು ಜವಾಬ್ದಾರರಲ್ಲ.) ಪಾತ್ರಗಳಲ್ಲೆಲ್ಲಾ ಈ ಬಂಜೆಯವರ ಪಾತ್ರ ಬಹಳ ಸೊಗಸಾಗಿ ಮೂಡಿ ಬಂದಿದೆ. ಹೊಲೆಯನೊಬ್ಬ ಕಾಲೇಜಿಗೆ ಸಂಸ್ಕೃತದ ಅಧ್ಯಾಪಕನಾಗಿ ಬರುವುದೆಂದರೆ ಅವರಿಗೆ ಸೋಜಿಗ, ಅವನಿಗೆ ಆ ಭಾಷೆಯ ಮೇಲೆ ತಮಗಿಂತ ಹೆಚ್ಚಿನ ಹಿಡಿತವಿದೆಯೆಂದು ತಿಳಿದಾಗ ಅವರಿಗೆ ಉದ್ವೇಗ, ಅವನಿಗೆ ಸುವರ್ಣ ಪದಕ ದೊರೆತಿದೆಯೆಂದರೆ ಯಾತನೆ, ಹೀಗೆ ಅನೇಕ ಆಘಾತಗಳನ್ನು ಅನುಭವಿಸುವ ಬಂಜೆಯವರು ತಮ್ಮ ಸೋಲಿನ ಸಂದರ್ಭದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ನಿಜ ಸ್ವರೂಪವನ್ನು ಗುರುತಿಸುತ್ತಾರೇನೋ ಎಂಬಂತೆ "ನೀವೆಲ್ಲಾ ಕಾಲೇಜಿನ ದುಡ್ಡು ತಿಂದು ಸೊಕ್ಕಿದ್ದೀರಿ" ಎಂದು ಮೂದಲಿಸುತ್ತಾರೆ. ಅವರು ಹೊಲೆಯ ಅಭ್ಯರ್ಥಿಯನ್ನು ಸಂಸ್ಕೃತದಲ್ಲೇ ಪರೀಕ್ಷಿಸುವ ದೃಶ್ಯ ನಾಟಕದಲ್ಲಿ ಅವರೇ ಲೇವಡಿಗೆ ಗುರಿಯಾಗುವುದರಲ್ಲಿ ಕೊನೆಗೊಳ್ಳುವುದು ಮೋಜೆನಿಸುತ್ತದೆ. ಮಧ್ವಾಚಾರ್ಯರು ಶಂಕರಾಚಾರ್ಯರಿಗಿಂತ ಶ್ರೇಷ್ಠರೆಂದು ತರ್ಕಿಸಲು ಅವರಿಗಿರುವ ಕಾರಣ ಅವರು ಹೆಚ್ಚು ಮಠಗಳನ್ನು ಸ್ಥಾಪಿಸಿದರೆಂಬುದು. ಅವರ ಬೌದ್ಧಿಕ ಬೆಳವಣಿಗೆಯ ಮಿತಿಯನ್ನು ಇದು ಚೆನ್ನಾಗಿ ಸೂಚಿಸುತ್ತದೆ. ಧರ್ಮಾಂಧತೆಗೆ ಇದಕ್ಕಿಂತಲೂ ಉತ್ತಮ ನಿದರ್ಶನ ಬೇಕಾಗಿಲ್ಲ. ಈ ಸ್ವಾರಸ್ಯಕರವಾದ ಸಂಭಾಷಣೆಯು ಅಚ್ಚಿನಲ್ಲಿ ಅನೇಕ ದೋಷಗಳಿಂದ ತುಂಬಿದೆ (ಪುಟಗಳು 26-27) ಎಂಬುದನ್ನು ಬಿಟ್ಟರೆ ನಾಟಕದ ನಾಲ್ಕನೆಯ ದೃಶ್ಯ ಅಚ್ಚುಕಟ್ಟಾಗಿ ಬಂದಿದೆ. ನಾಟಕ ರಂಗದ ಮೇಲೆ ಕೂಡ ಅದು ಸರಳವಾಗಿ ನಿರೂಪಿತವಾಗಿ ಸಂಸ್ಕೃತ ಭಾಷೆಯ ಅಡಚಣೆ ಇಲ್ಲದಂತೆಯೇ ತೋರಬಹುದೆಂದು ಈ ವಿಮರ್ಶಕನ ಭಾವನೆ. ಮೊದಲನೆಯ ದೃಶ್ಯದಲ್ಲಿ ಕಾಲೇಜಿನ ಪ್ರಿನ್ಸಿಪಾಲರು ನಿರರ್ಗಳವಾಗಿ ಕೊಚ್ಚುವ ಭಾಷಣದ ವಸ್ತು ಮತ್ತು ಅವರ ಅಂತರಂಗ ಭಾವನೆಗಳ ನಡುವಣ ವ್ಯತ್ಯಾಸವು ನಾಟಕದ ಉದ್ದೇಶದ ಜೀವಾಳವಾಗಿದೆ. ಅದನ್ನು ಪ್ರಭಾವಶಾಲಿಯಾಗಿ ಹೊರತಂದಿರುವುದು ನಾಟಕಕಾರರ ಕೌಶಲ್ಯಕ್ಕೆ ನಿದರ್ಶನವಾಗಿದೆ.

ನಾಟಕವು ವಿಶೇಷವಾಗಿ ಹೆಚ್ಚುಹೆಚ್ಚು ಕಾಲೇಜುಗಳಲ್ಲಿ ಪ್ರದರ್ಶಿತವಾಗಬೇಕು. ಅದರಿಂದ ಚಿಂತನೆ ಮತ್ತು ಚರ್ಚೆ ಹೊರಹೊಮ್ಮಿ ವರ್ಗ ಸಂಘರ್ಷಕ್ಕೆ ಬೆಂಬಲ ಬೆಳೆಯಬೇಕು. ಈ ದಿಕ್ಕಿನಲ್ಲಿ ಶ್ರೀ ಕೆ.ಎಚ್. ಪ್ರಭು ಅವರು ಸ್ವಲ್ಪಮಟ್ಟಿನ ಯಶಸ್ಸು ಪಡೆದರೂ ಅವರ ಕೊಡುಗೆ ಮಹತ್ವದ್ದಾದೀತು.

—ಆರ್ಯಮನ್

○

ಆರ್. ಎಸ್. ಎಸ್. – ಕಾಂಗ್ರೆ ಗೂಂಡಾಗಳ ಆಕ್ರಮಣ

ತ್ರಿಚೂರು ಜಿಲ್ಲೆಯಲ್ಲಿ ಆರ್. ಎಸ್. ಎಸ್.-ಕಾಂಗ್ರೆ ಗೂಂಡಾಗಳು ಸೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಇಬ್ಬರು ಕಾರ್ಯಕರ್ತರನ್ನು ಕೊಲೆ ಮಾಡಿದರು. ಮತ್ತು ಮೂವರು ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿ ತೀವ್ರ ಗಾಯಗಳಿಗೊಳಗಾಗಿ ಅವರನ್ನು ಆಸ್ಪತ್ರೆಯಲ್ಲಿ ಸೇರಿಸಲಾಗಿದೆ. ಅವರಲ್ಲಿ ಒಬ್ಬರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ.

ಕಳೆದ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆ-ಆರ್. ಎಸ್. ಎಸ್. ಮೈತ್ರಿಕೂಟವನ್ನು ಕೇರಳ ಜನತೆ ತಿರಸ್ಕರಿಸಿದ ಪರಿಣಾಮವಾಗಿ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರದ ಆಡಳಿತದಲ್ಲಿ ಶಾಂತಿ, ಕಾನೂನನ್ನು ಭಗ್ನಗೊಳಿಸಲು ನಡೆಸುತ್ತಿರುವ ಪಿತೂರಿಯ ಒಂದು ಭಾಗವೇ ಈ ಆಕ್ರಮಣ.

ಸಿ. ಪಿ. ಐ. (ಎಂ) ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ವಿ. ಎಸ್. ಅಚ್ಯುತಾನಂದನ್, ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ಎ. ಕೆ. ಆಂಟನಿ ಹಾಗೂ ಸಿ. ಪಿ. ಐ. ನ ಕಾರ್ಯದರ್ಶಿ ಕಾಂ. ಎನ್. ಇ. ಬಾಲರಾಮ್‌ರವರು ಮೃತರಾದವರ ಮನೆಗಳಿಗೆ ಭೇಟಿಮಾಡಿ ಅವರ ಕುಟುಂಬಗಳಿಗೆ ಆಶ್ವಾಸನೆ ನೀಡಿದರು. ಕಾಂಗ್ರೆ-ಆರ್. ಎಸ್. ಎಸ್. ಗೂಂಡಾಗಳ ಈ ಆಕ್ರಮಣವನ್ನು ಖಂಡಿಸಿ ಜನತೆ ಸಂಘಟಿತರಾಗಿ ಇವರ ಪಿತೂರಿಯನ್ನು ಮುರಿಯಲು ಕರೆಯಿತ್ತರು.

ಗೃಹ ಸಚಿವ ಕಾಂ. ಬಿ. ಕೆ. ರಾಮಕೃಷ್ಣನ್‌ರವರು ಹಲ್ಲೆ ನಡೆಸಿದವರ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಆಗಲೇ ಮೂರು ಜನರನ್ನು ಬಂಧಿಸಿದ್ದಾರೆ. ಅವರು ಕೊಲೆಗೆ ಉಪಯೋಗಿಸಿದ ಚಾಕು, ರಾಕುಗಳನ್ನು ಪೋಲೀಸರು ವಶಪಡಿಸಿ ತನಿಖೆ ನಡೆಸುತ್ತಿದ್ದಾರೆ.

○

ಗುಲ್ಬರ್ಗದಲ್ಲಿ ಐಕ್ಯ ಹೋರಾಟ ಸಮಿತಿ ರಚನೆ

ಗುಲ್ಬರ್ಗದ ಪ್ರಗತಿಪರ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳಾದ ಎಸ್.ಎಫ್.ಐ., ಡಿ.ವೈ.ಎಫ್., ಎ.ಐ.ಎಸ್.ಎಫ್., ಎ.ಐ.ವೈ.ಎಫ್ ಮತ್ತು ಎಸ್.ಸಿ.ಎಸ್.ಟಿ. ಸ್ಟೂಡೆಂಟ್ಸ್ ಫೆಡರೇಶನ್‌ಗಳು ಒಟ್ಟಿಗೆ ಸೇರಿ ಸಭೆ ನಡೆಸಿ, ಸ್ಥಳೀಯ ಸಮಸ್ಯೆಗಳ ಮೇಲೆ ಚರ್ಚೆ ನಡೆಸಿದ ನಂತರ, "ವಿದ್ಯಾರ್ಥಿ ಯುವಜನ ಐಕ್ಯ ಹೋರಾಟ ಸಮಿತಿ"ಯನ್ನು ರಚಿಸಿದ್ದಾರೆ. ಗುಲ್ಬರ್ಗದಲ್ಲಿ ಪ್ರಾರಂಭವಾಗಲಿರುವ ಹೊಸ ವಿಶ್ವವಿದ್ಯಾಲಯಕ್ಕೆ ಬೇರೆ ಕಡೆಯಿಂದ ಸಿಬ್ಬಂದಿಯನ್ನು ವರ್ಗಾಯಿಸದೆ, ಸ್ಥಳೀಯ ನಿರುದ್ಯೋಗಿಗಳನ್ನೇ ನೇಮಿಸಿಕೊಳ್ಳಲು ಸಮಿತಿ ಒತ್ತಾಯಿಸಿದೆ. ಬೆಲೆ ಏರಿಕೆ, ಹೋಟೆಲು ತಿಂಡಿಗಳ ಬೆಲೆ ಏರಿಕೆ, ರಸ್ತೆ ಸಾರಿಗೆ ಬಸ್ಸು ಸಂಚಾರ ಸಮಯಕ್ಕೆ ಸರಿಯಾಗಬೇಕೆಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸಂಯುಕ್ತ ಚಳುವಳಿ ನಡೆಸಲಾಗುವುದು

○

ಹರಿಜನರ ಗುಡಿಸಲಿಗೆ ಬೆಂಕಿ

ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿ ಅಲಂಗುಡಿ ಒಂದು ಸಣ್ಣ ಹಳ್ಳಿ. ಅಲ್ಲಿನ ಹರಿಜನರೆಲ್ಲ ಕೃಷಿಕಾರ್ಮಿಕರು. ಸವರ್ಣೀಯ ಮೇಲುಜಾತಿಯವರು ಭೂಮಾಲೀಕರು. ಪ್ರತಿವರ್ಷ ಪೊಂಗಲ್ ದಿನದಂದು ಈ ಇಬ್ಬರು ಜಾತಿಯವರೂ ಒಟ್ಟಿಗೆ ಸೇರಿ ಕಾಳಿ ದೇವಾಲಯದಲ್ಲಿ ಹಬ್ಬ ಆಚರಿಸುವ ಪರಿಪಾಠವಿತ್ತು. ಆದರೆ ಈ ವರ್ಷ ಮೇಲುಜಾತಿಯ ಹಿಂದುಗಳು, ಅಸ್ಪೃಶ್ಯರ ಜತೆ ಸೇರಿ ಹಬ್ಬ ಮಾಡಬಾರದೆಂದು ನಿರ್ಧರಿಸಿದರು. ಹರಿಜನ ಯುವಕರು ಇದನ್ನು ಪ್ರತಿಭಟಿಸಿ, ಒಟ್ಟಿಗೆ ಮಾಡಬೇಕೆಂದು ಒತ್ತಾಯಿಸಿದಾಗ ಅವರನ್ನು ಅಮಾನುಷವಾಗಿ ಹೊಡೆಯಲಾಯಿತು. ಇಷ್ಟು ಸಾಲದೆ, ಹರಿಜನ ಕೇರಿಯ 33 ಗುಡಿಸಲುಗಳಿಗೆ ಬೆಂಕಿ ಹಚ್ಚಿದರು. ಇದಕ್ಕೆ ಪೋಲೀಸರ ರಕ್ಷಣೆ ಚೆನ್ನಾಗಿತ್ತು. ಪೋಲೀಸು ವ್ಯಾನಿನಿಂದಲೇ ಡೀಸೆಲ್ ತೆಗೆದು ಗುಡಿಸಲುಗಳಿಗೆ ಸುರಿದು ಬೆಂಕಿ ಹಚ್ಚಿ, ಸೋಡಾ ಬಾಟಲ್‌ಗಳನ್ನು ಎಸೆದರು.

ಈ ಬಡ ಹರಿಜನರಿಗೆ ಅಗ್ನಿ ಶಾಮಕದಳದವರಿಗೆ ಸುದ್ದಿ ತಿಳಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಅಂಚೆ–ತಂತಿ ಅಧಿಕಾರಿಗಳು ದೂರವಾಣಿ ಮಾಡಲು ಅವಕಾಶ ನೀಡಲಿಲ್ಲ. ಪೋಲೀಸರು ದೂರು ದಾಖಲು ಮಾಡಿಕೊಳ್ಳಲಿಲ್ಲ. ಹಳ್ಳಿಯನ್ನು ಹಾದುಹೋಗುವ ಬಸ್ಸುಗಳ ಪ್ರಯಾಣಿಕರಿಂದ ಸುದ್ದಿ ತಿಳಿದು ಅಗ್ನಿಶಾಮಕದಳ ಬಂದಾಗ ಮೇಲು ಜಾತಿಯ ಹಿಂದುಗಳು ಅವರು ಹಳ್ಳಿಯನ್ನು ಪ್ರವೇಶಿಸದಂತೆ ತಡೆದರು. ಯಾವ ಸರ್ಕಾರಿ ಅಧಿಕಾರಿಯೂ ಇಲ್ಲಿಗೆ ಭೇಟಿ ನೀಡಲಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಕಾಂ. ಮಣಿ ಅರಸನ್ ಅವರು ಕೆಲವು ಸಿ. ಐ. ಟಿ. ಯು. ಕಾರ್ಯಕರ್ತರೊಡನೆ ಹಳ್ಳಿಗೆ ಹೋಗಿ ಆಹಾರ ವಸತಿಗಳನ್ನು ಒದಗಿಸಲು ಪ್ರಯತ್ನಿಸಿದರು. ಜಿಲ್ಲಾ ಕಲೆಕ್ಟರ್ ಅವರಿಗೆ ಸುದ್ದಿ ತಿಳಿಸಿದರು. ಅವರು ಪ್ರತಿಯೊಬ್ಬರಿಗೆ 100 ರೂ. ಗಳನ್ನು ರಾಜ್ಯ ಸರ್ಕಾರದಿಂದ ಕೊಡಿಸಿದರು.

ಇನ್ನಾವ ರಾಜಕೀಯ ಪಕ್ಷವೂ ಈ ಬಗ್ಗೆ ಕಾಳಜಿ ವಹಿಸಲಿಲ್ಲ. ಹರಿಜನರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರ ಸಹಾಯವನ್ನು ಕೃತಜ್ಞತೆಯಿಂದ ನೆನೆಸಿ, ಆ ಪಕ್ಷಕ್ಕೆ ತಮ್ಮ ಬೆಂಬಲ ನೀಡಲು ನಿರ್ಧರಿಸಿದ್ದಾರೆ.

○

ರಾಯಚೂರಿನಲ್ಲಿ ಪ್ರಗತಿಪರ ಮಹಿಳಾ ಸಂಘದ ಸ್ಥಾಪನೆ

(2ನೇ ಪುಟದಿಂದ)

ಸಮಸ್ಯೆಗಳಿದ್ದರೂ ಎಲ್ಲ ರೀತಿಯ ಸಹಾಯ ಹಾಗೂ ಸಹಕಾರಗಳನ್ನು ಒದಗಿಸಲಾಗುವದೆಂದು ನಮ್ಮ ಸಂಘವು ಸಾರ್ವಜನಿಕರಿಗೆ ತಿಳಿಸುತ್ತದೆ.

ನಗರದ ಹಾಗೂ ಸುತ್ತಲಿನ ಹಳ್ಳಿಗಳ ಎಲ್ಲ ಮಹಿಳೆಯರು ತಮ್ಮ ಯಾವುದೇ ಸಮಸ್ಯೆಗಳನ್ನು ಸಂಘದ ಗಮನಕ್ಕೆ ತರಬೇಕಲ್ಲದೆ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸದಸ್ಯರಾಗಿ ತಮ್ಮ ತನು ಮನ ಧನಗಳ ಸಹಾಯ ನೀಡಿ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಸಹಕರಿಸಬೇಕೆಂದು "ಪ್ರಗತಿಪರ ಮಹಿಳಾ ಸಂಘವು" ವಿನಂತಿಸಿಕೊಂಡಿದೆ. ಸದಸ್ಯತ್ವದ ಶುಲ್ಕ ಒಂದು ರೂಪಾಯಿ ಆಗಿರುತ್ತದೆ.

ಎಲ್ಲ ಮಹಿಳೆಯರು ಹಾಗೂ ಸಾರ್ವಜನಿಕರು ಈ ಕೆಳಗಿನ ವಿಳಾಸದೊಂದಿಗೆ ಸಾಯಂಕಾಲ 4 ರಿಂದ 8 ರವರೆಗೆ ಪ್ರತ್ಯಕ್ಷ ಬಂದು ಅಥವಾ ಪತ್ರ ಮುಖಾಂತರ ವ್ಯವಹರಿಸಬಹುದು.

ವಿಳಾಸ :

ಪ್ರಗತಿಪರ ಮಹಿಳಾ ಸಂಘ
ಮನೆ ನಂ. 3-8-72
ಕೋಟೆ ವಿಭಾಗ
ಫ್ರಾ ವರ್ ರೋಡ್ ಪೇಟ್ಲಾ ಬುರಜ
ರಾಯಚೂರು-1.

ಕಾಮನ್‌ವೆಲ್ತ್‌ನ ಕಾರ್ಮಿಕರು ಹೋರಾಟದ ಪಥದಲ್ಲಿ

ಕಳೆದ ನಾಲ್ಕು ವರ್ಷಗಳಿಂದ ಕೈಗಾರಿಕಾ ನ್ಯಾಯಾಲಯದಲ್ಲಿ ಇದ್ದ ವಿವಾದವನ್ನು ಇತ್ಯರ್ಥಗೊಳಿಸಿರಿ ಇಲ್ಲವೆ ವಿವಾದ ಮುಗಿಯುವವರೆಗೆ ಮಧ್ಯಾವಧಿ ಪರಿಹಾರ ಕೊಡಿ ಎಂದು ಮಂಗಳೂರಿನ ಕುದ್ರೋಳಿ ಕಾಮನ್‌ವೆಲ್ತ್ ಕಾರ್ಖಾನೆಯ ಮಾಲಕರನ್ನು ಮಜೂರರು ಒತ್ತಾಯಿಸಿದಾಗ ಮೊದಲು ಎಲ್ಲಾ ವಿವಾದಗಳನ್ನು ರಾಜಿಯಿಂದ ಮುಗಿಸಲು ತಯಾರೆಂದು ಮಜೂರರಿಗೆ ಭರವಸೆಕೊಟ್ಟ ಕ್ರಮೇಣ ಹಿಂಜರಿದದ್ದು ಮಾತ್ರವಲ್ಲ ತಾ. 4-3-1980 ರಿಂದ ಕಾರ್ಖಾನೆಯನ್ನು "ಲಾಕ್‌ಔಟ್" ಮಾಡಿ ಸಾಧಾರಣ 300 ಮಜೂರರನ್ನು ಉಪವಾಸದ ದವಡೆಗೆ ನೂಕಿದ ಕಾಮನ್‌ವೆಲ್ತ್ ಟ್ರಸ್ಟ್ ಮೇನೇಜುಮೆಂಟಿನ ವರ್ತನೆಯನ್ನು ದ. ಕ. ಜಿಲ್ಲಾ ಸಿ. ಐ. ಟಿ. ಯು. ಸಮಿತಿಯು ಖಂಡಿಸಿದೆ. ಮಜೂರರಿಗೆ ಸಲ್ಲತಕ್ಕ ಬೋನಸ್ಸು, ದುಡಿದ ವೇತನವನ್ನು ಇನ್ನೂ ಕೊಡಲಿಲ್ಲ. ದ. ಕ. ಜಿಲ್ಲಾ ಸಿ. ಐ. ಟಿ. ಯು. ಎಲ್ಲಾ ಯೂನಿಯನುಗಳು ಕುದ್ರೋಳಿ ಕಾಮನ್‌ವೆಲ್ತ್‌ನ ಮಜೂರರ ಹೋರಾಟಕ್ಕೆ ಬೆಂಬಲ ನೀಡಬೇಕೆಂದೂ, ಮಜೂರರ ಬೇಡಿಕೆಗಳನ್ನು ಕೂಡಲೇ ಇತ್ಯರ್ಥ ಮಾಡಬೇಕೆಂದು ಮೇನೇಜುಮೆಂಟನ್ನೂ ಸರಕಾರವನ್ನೂ ಎಲ್ಲಾ ಯೂನಿಯನುಗಳು ಒತ್ತಾಯಿಸಬೇಕೆಂದೂ, ಸಿ. ಐ. ಟಿ. ಯು. ದ. ಕ. ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ಕೆ. ಮೂಸಬ್ಬ ಎಲ್ಲಾ ಯೂನಿಯನುಗಳನ್ನು ಕೇಳಿಕೊಂಡಿರುವರು.

○

ನಗರಸಭೆ ಚುನಾವಣೆ ನಡೆಯಲಿ

ಹುಬ್ಬಳ್ಳಿ-ಧಾರವಾಡ ನಗರಸಭೆ ಚುನಾವಣೆ ನಡೆಯದೆ ಎಷ್ಟೋ ಕಾಲದಿಂದ ನಿಂತಿದೆ. ವಿಧಾನಸಭೆಯಲ್ಲಿ ಧರ್ಮಸಿಂಗ್ ಹೇಳಿಕೆಯನ್ನೇನೋ ನೀಡಿದ್ದಾರೆ. ಆದರೆ ಆಶ್ವಾಸನೆಗಳು ಎಂದೂ ನಡೆದಿಲ್ಲ. ತುರ್ತುಪರಿಸ್ಥಿತಿಯಲ್ಲಿ ನಗರಸಭೆ ಆಡಳಿತವನ್ನು ಸರ್ಕಾರ ವಹಿಸಿಕೊಂಡಿತು. ಆಮೇಲೆ ಏನೂ ಪ್ರಗತಿ ಸಾಧಿಸಿಲ್ಲ. ಆಸ್ಪತ್ರೆಗಳಿಗೆ ಔಷಧಿ ಕೊರತೆಯಿದೆ. ಬೀದಿ, ದೀಪ, ನಲ್ಲಿಗಳ ಪಾಡು ಬೇಡ. ಚುನಾವಣೆ ಬೇಗ ನಡೆದರೆ ಈ ಬಗ್ಗೆ ಸಾರ್ವಜನಿಕರು ಒತ್ತಾಯಿಸಬಹುದು. ○

ರೈತಜನಾಂಗಕ್ಕೆ ಕೇಂದ್ರ ಕಿಸಾನ್‌ಸಮಿತಿಯ ಕರೆ

ಅಖಿಲ ಭಾರತ ಕಿಸಾನ್ ಸಭೆಯ ಕೇಂದ್ರ ಕಿಸಾನ್ ಸಮಿತಿಯು ಮಾರ್ಚಿ 17 ಮತ್ತು ಹದಿನೆಂಟರಂದು ನವದೆಹಲಿಯಲ್ಲಿ ಸಭೆ ಸೇರಿತ್ತು. ಪ. ಬಂಗಾಳದ ಭೂಕಂದಾಯ ಸಚಿವರೂ, ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷರೂ ಆದ ಬಿನೊಯ್‌ಕೃಷ್ಣ ಚೌಧುರಿಯವರು ಅಧ್ಯಕ್ಷತೆ ವಹಿಸಿದರು.

ಸಮಿತಿಯು ಆರ್ಥಿಕ ರಂಗದ ಕುಸಿತವನ್ನು ಕುರಿತು ಚರ್ಚಿಸಿತು. ಕಾಂಗ್ರೆಸ್ (ಐ)ನ ಎರಡು ತಿಂಗಳ ಆಡಳಿತ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ ಎಂದು ಸಭೆ ಅಭಿಪ್ರಾಯಪಟ್ಟಿತು. ರೈತರಿಗೆ ನ್ಯಾಯವಾದ ಬೆಲೆಯನ್ನು ಸರ್ಕಾರ ಕೊಡಲಾರದೆ ಹೋದದ್ದರಿಂದ ಕಬ್ಬಿನ ಉತ್ಪಾದನೆ ಇಳಿದಿದೆ. ಬಿಹಾರ, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಒರಿಸ್ಸಾ ಗುಜರಾತ್, ಆಂಧ್ರಪ್ರದೇಶದ ಅನೇಕ ಭಾಗಗಳು ಬರಗಾಲಕ್ಕೀಡಾಗಿವೆ. ಕೃಷಿ ಉತ್ಪಾದನೆಗೆ ಧಕ್ಕೆ ಒದಗಿದೆ ಎಂದು ಸಮಿತಿ ಗಮನ ಸೆಳೆಯಿತು. ಗೇಣಿದಾರರು, ಕೃಷಿಕಾರ್ಮಿಕರು, ಹರಿಜನರ ಮೇಲೆ ಹಲ್ಲೆಗಳು ಹೆಚ್ಚುತ್ತಿರುವುದನ್ನು ಕಳವಳದಿಂದ ಪರಿಶೀಲಿಸಲಾಯಿತು. ಭೂಮಾಲೀಕರು ಅನ್ಯಾಯವಾಗಿ ಹೊಂದಿರುವ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡು ಭೂಹೀನರಿಗೆ ಹಂಚಬೇಕೆಂದು ಸಭೆ ಒತ್ತಾಯಿಸಿತು.

ಪ. ಬಂಗಾಳ, ತ್ರಿಪುರ, ಕೇರಳಗಳ ಸರ್ಕಾರಗಳು ರೈತಜನಾಂಗದ ಪರಿಸ್ಥಿತಿಯನ್ನು ಉತ್ತಮಪಡಿಸುವ ಕ್ರಮಗಳನ್ನು ಕೈಗೊಂಡಿರುವುದನ್ನು ಸಭೆ ಅಭಿನಂದಿಸಿತು. ಗ್ರಾಮೀಣ ಜನತೆ ಈ ವಾಮಪಂಥೀಯ ಸರ್ಕಾರಗಳನ್ನು ಕಾಪಾಡಬೇಕೆಂದು ಕರೆಕೊಟ್ಟಿತು.

ರೈತರು ಮತ್ತು ಗ್ರಾಮೀಣಬಡವರು ಒಟ್ಟಾಗಿ ಸೇರಿ ಕಾರ್ಯಾಚರಣೆ ನಡೆಸಬೇಕೆಂದು ಸಮಿತಿ ಸಲಹೆಮಾಡಿತು. ಸರ್ವಾಧಿಕಾರಿ, ಸಾಮ್ರಾಜ್ಯವಾದಿ ಪ್ರವೃತ್ತಿಗಳನ್ನು ತಡೆಯಲು ಇವರೂ ಒಗ್ಗಟ್ಟಾಗಬೇಕೆಂದು ಸಮಿತಿ ಕರೆನೀಡಿತು.

○

ಪತ್ರಿಕಾ ಸಂಪಾದಕನಿಂದ ಬ್ಲಾಕ್‌ಮೇಲ್

ಬಿಜಾಪುರದ ಒಂದು ಸಣ್ಣ ಪತ್ರಿಕೆಯ ಸಂಪಾದಕನಾದ ಪಣ್ಮುಕಪ್ಪ ಬೆದರಿ, ಸರ್ಕಾರಿ ಉದ್ಯೋಗಿಗಳ ಬಗ್ಗೆ ಸಲ್ಲದ್ದನ್ನು ಬರೆದು, ಅವರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಈ ಹೊಲಸು ಸಂಪಾದಕೀಯ ಪತ್ರಿಕೋದ್ಯಮಕ್ಕೇ ಕಳಂಕಪ್ರಾಯವಾಗಿದೆ. ಈ ಪತ್ರಿಕೆಯನ್ನು ಬಂದುಮಾಡಲು ಹೋರಾಡುವುದು ಪ್ರಗತಿಪರರೆಲ್ಲರ ಕರ್ತವ್ಯವಾಗಿದೆ. ●

ಹೋಟೆಲ್ ಅಶೋಕ ನೌಕರರ ಪ್ರತಿಭಟನೆ

ಹೋಟೆಲ್ ಅಶೋಕ (ಐ ಟಿ. ಡಿ. ಸಿ)ದಲ್ಲಿನ ಸಿ.ಐ.ಟಿ ಯು. ನೇತೃತ್ವದಲ್ಲಿರುವ ಹೋಟೆಲ್ ಅಶೋಕ ಕಾರ್ಮಿಕರ ಸಂಘವು 14-4-80 ರಂದು ಪ್ರತಿಭಟನಾ ದಿನಾಚರಣೆಯನ್ನು ಆಚರಿಸಿತು. ನಿಲ್ಲಿಸಿರುವ ಉಚಿತ ಉಪಾಹಾರ ವ್ಯವಸ್ಥೆಯ ಪುನರಾರಂಭ, ವಿಮಾನ ನಿಲ್ದಾಣ ರೆಸ್ಟೋರೆಂಟಿನ ಕೆಲಸಗಾರರ ನೌಕರಿ ಖಾಯಂ, ವೇತನ ಪರಿಷ್ಕರಣ ಸಮಿತಿಯ ವರದಿಯಂತೆ ಬಾಕಿ ಹಣವನ್ನು ಅವರಿಗೆ ಕೊಡುವುದು ಹೀಗೆ ಅನೇಕ ಬೇಡಿಕೆಗಳನ್ನು ಆಡಳಿತ ವರ್ಗಕ್ಕೆ ಸಲ್ಲಿಸಿ ಒತ್ತಾಯಿಸಿದರು. ಎಲ್ಲ ಕಾರ್ಮಿಕರೂ ಬ್ಯಾಡ್ಜ್ ಧರಿಸಿ, ಘೋಷಣೆಕೂಗಿ, ನಂತರ ಸಭೆ ನಡೆಸಿದರು ಸಂಘದ ಅಧ್ಯಕ್ಷರಾದ ಕಾಂ. ಟಿ. ಎಸ್. ಅನಂತರಾಂ ಅವರು ಸಭೆಯಲ್ಲಿ ಮಾತನಾಡಿದರು. ಕಾರ್ಯದರ್ಶಿ ಕಾಂ. ರಾಮಯ್ಯ ದಿನಾಚರಣೆಯ ಯಶಸ್ಸಿನ ಬಗ್ಗೆ ವಂದಿಸಿದರು. ●

ದ. ಕ. ಜಿಲ್ಲಾ ಸಿ. ಐ. ಟಿ. ಯು. 2ನೇ ಸಮ್ಮೇಳನ

(3ನೇ ಪುಟದಿಂದ)

ಈ ನಿರ್ಣಯಗಳಲ್ಲದೆ ಬೆಲೆಏರಿಕೆ ವಿರುದ್ಧ ಜಿಲ್ಲೆಯಾದ್ಯಂತ ಸಿ. ಐ. ಟಿ. ಯು. ನಡೆಸಲಿರುವ ಚಳುವಳಿಯನ್ನು ಯಶಸ್ವಿಗೊಳಿಸಬೇಕೆಂದೂ, ನಿತ್ಯೋಪಯೋಗಿ ವಸ್ತುಗಳು ಜನತೆಗೆ ನ್ಯಾಯ ಬೆಲೆಯಲ್ಲಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು.

ಅಧ್ಯಕ್ಷರಾಗಿ ಪಿ. ಆರ್. :

ದ ಕ. ಜಿಲ್ಲೆಯ ಸಿ. ಐ. ಟಿ. ಯು. ಅಧಿಕಾರ ವರ್ಗಕ್ಕೆ ನಡೆದ ಚುನಾವಣೆಯಲ್ಲಿ ಕಾಂ. ಪಿ ರಾಮಚಂದ್ರರಾವ್ ಅವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದರು. ಕಾಂ. ಮಾಧವ, ಕಾಂ. ಸೂರ್ಯನಾರಾಯಣ ಭಟ್ ಮತ್ತು ಕಾಂ. ಬಿ ನಾರಾಯಣ ಅವರುಗಳು ಉಪಾಧ್ಯಕ್ಷರಾಗಿಯೂ, ಕಾಂ. ಕೆ. ಮೂಸಬ್ಬ ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಕಾಂ. ಶಂಕರ, ಕಾಂ ಯು ಬಿ. ಲೋಕಯ್ಯ ಮತ್ತು ಕಾಂ ಕೆ. ಜಾನಮ್ಮ ಅವರು ಸಹ ಕಾರ್ಯದರ್ಶಿಗಳಾಗಿಯೂ ಹಾಗೂ ಕಾಂ. ಬಿ ಕೊರಗಪ್ಪರೈ ಅವರು ಕೋಶಾಧಿಕಾರಿಯಾಗಿ ಸರ್ವಾನುಮತದಿಂದ ಆಯ್ಕೆಗೊಂಡರು. 30 ಜನ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿಯನ್ನೂ ಸಹ ಸಮ್ಮೇಳನವು ರಚಿಸಿತು.

○

ಜಿ. ಆರ್. ಇಂಡಸ್ಟ್ರೀಸ್ ಕಾರ್ಮಿಕರ ಹೋರಾಟ

ಬೆಂಗಳೂರಿನ ಜಿ. ಆರ್. ಇಂಡಸ್ಟ್ರೀಸ್‌ನ ಕಾರ್ಮಿಕರು, ಹಲವಾರು ಬೇಡಿಕೆಗಳ ಈಡೇರಿಕೆ ನಡೆಯಲೆಂದು ಪ್ರತಿಭಟನಾ ದಿನಾಚರಣೆ ಆಚರಿಸಿದರು. ಕಾರ್ಮಿಕರಿಗೆ ಆಂಬುಲೆನ್ಸ್ ವ್ಯವಸ್ಥೆ, ಕ್ಯಾಂಟೀನ್ ವ್ಯವಸ್ಥೆ, ಸೈಕಲ್ ವ್ಯವಸ್ಥೆ ಮುಂತಾದುವನ್ನು ಕಾರ್ಮಿಕರು ಕೋರಿದ್ದಾರೆ. ಸಂಜೆ ನಡೆದ ಬಹಿರಂಗಸಭೆಯಲ್ಲಿ ಹರ್ಬರ್ಟ್ ಇಂದಿಯಾದ ಕಾಂ. ಕುಂಜಪ್ಪನ್ ಶಿವಮಣಿ ಇಂದ ಕಾಂ. ಅಶೋಕ್ ಮೆಹತಾ ಮುಂತಾದವರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಿ. ಐ. ಟಿ. ಯು. ಜಿಲ್ಲಾ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ ವಹಿಸಿದ್ದರು. ಪ್ರಾರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಣ್ಣುಗಂ ಸ್ವಾಗತಿಸಿದರು. ●

ಅಸ್ಸಾಂ ಸಮಸ್ಯೆ ಹಾಗೂ ಯುವಜನರ ಜವಾಬ್ದಾರಿ

[ಒಂದನೇ ಪುಟದಿಂದ]

ಉರಿಯುವ ಬೆಂಕಿಗೆ ಎಣ್ಣೆ ಸುರಿಯುವ ಕೆಲಸವನ್ನು ಸಿ. ಐ. ಎ. ಎಷ್ಟು ಸಮರ್ಪಕವಾಗಿ ಮಾಡುತ್ತಿದೆ ಎಂಬುದಕ್ಕೆ ಕೆಲವೊಂದು ಸಾಕ್ಷ್ಯಾಧಾರಗಳು ಸಿಕ್ಕಿವೆ. ಪ. ಬಂಗಾಳ ತ್ರಿಪುರಾದಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಸರಕಾರಗಳು ಅಧಿಕಾರದಲ್ಲಿರುವುದು ಅಮೇರಿಕದವರಿಗೆ ಸ್ವಲ್ಪವೂ ಸ್ಮರಿಸದ ವಿಷಯವಾಗಿದೆ. ಆದ್ದರಿಂದಲೇ ಇವೆರಡು ರಾಜ್ಯಗಳ ಮಧ್ಯೆ ಇರುವ ಅಸ್ಸಾಂನಲ್ಲಿ ಬಂಗಾಲಿ ವಿರೋಧಿ ಭಾವನೆಗಳನ್ನು ಬೆಳೆಸುತ್ತಿದೆ, ಬಂಗಾಲಿಗಳ "ಮೌನ ಆಕ್ರಮಣ"ದ ಕೂಗು ಹಾಕಿದೆ. ಸಿ. ಐ. ಎ. ಚಟುವಟಿಕೆಗಳನ್ನು ಕುರಿತು ಫಿಲಿಪ್ ಏಜಿಯವರು ಬರೆದ "ಇನ್‌ಸೈಡ್ ದಿ ಕಂಪನಿ" ಪುಸ್ತಕದಲ್ಲಿ ಪೂರ್ವ ಭಾರತದಲ್ಲಿ ಸಿ. ಐ. ಎ. ಚಟುವಟಿಕೆಗಳ ಕೆಲವೊಂದು ಸ್ವರೂಪಗಳಲ್ಲಿ 1. ಕಮ್ಯುನಿಸ್ಟರು ಮತ್ತು ಕಮ್ಯುನಿಸಂ ವಿರುದ್ಧ ವ್ಯಾಪಕ ಪತ್ರಿಕಾ ಪ್ರಚಾರವನ್ನು ಚುನಾವಣೆಗಳ ಮೊದಲು ನಡೆಸುವುದು 2. "ಕೆಂಪು" ಕಾರ್ಮಿಕ ಸಂಘಗಳನ್ನು ಛಿದ್ರಗೊಳಿಸಿ, ಕಮ್ಯುನಿಸ್ಟೇತರ ಕಾರ್ಮಿಕ ಸಂಘಗಳನ್ನು ಅಧಿಕಾರಕ್ಕೆ ತರುವುದು ಹಾಗೂ 3. ಕಮ್ಯುನಿಸ್ಟ್ ವಿರೋಧಿ ವಿದ್ಯಾರ್ಥಿ ಚಳುವಳಿಗಳಿಗೆ ಬೆಂಬಲ ಕೊಡುವುದು ಆಗಿದೆ ಎಂದು ತಿಳಿಸಿದ್ದಾರೆ. ಇಂದಿನ ಅಸ್ಸಾಂ ಪರಿಸ್ಥಿತಿಯನ್ನು ನೋಡಿದಾಗ ಇದು ವಾಸ್ತವಾಂಶವೆಂದು ಎಲ್ಲರಿಗೂ ವ್ಯಕ್ತವಾಗುತ್ತಿದೆ. ಭಾರತೀಯ ಅರ್ಥವ್ಯವಸ್ಥೆ ಹಾಗೂ ರಾಜಕೀಯ ಬಿಕ್ಕಟ್ಟಿಗೆ ಸಿಲುಕಿದಾಗೆಲ್ಲಾ, ಜನರಿಗೆ ಪರ್ಯಾಯ ಶಕ್ತಿಯಾಗಿ ಕಾಣುವುದು ಎಡಪಕ್ಷಗಳು. ಇದೇ ಸಮಯ ಪ್ರಾದೇಶಿಕ ಪಕ್ಷಗಳಿಗೆ ಮತ್ತು ಸಂಕುಚಿತ ಶಕ್ತಿಗಳಿಗೆ ಕೂಡಾ ಒಳ್ಳೆಯ ಅವಕಾಶ. ಸಿ. ಐ. ಎ. ಈ ಪ್ರಾದೇಶಿಕ, ಸಂಕುಚಿತ ಶಕ್ತಿಗಳನ್ನು ಪ್ರೋತ್ಸಾಹಿಸುವುದರ ಮೂಲಕ ಎಡಪಕ್ಷಗಳ ಪ್ರಭಾವವನ್ನು ತಡೆಗಟ್ಟಲು ಪ್ರಯತ್ನಿಸುತ್ತಿದೆ.

ಅಸ್ಸಾಂನ ಆರ್ಥಿಕ ಹಿಂದುಳಿವಿಕೆಯೇ ಯುವಜನರ ನಿರುದ್ಯೋಗಕ್ಕೆ ಕಾರಣ. ಆದರೆ ನಿರುದ್ಯೋಗಕ್ಕೆ ಕಾರಣವಾಗಿರುವ ಆರ್ಥಿಕ-ರಾಜಕೀಯ ಶಕ್ತಿಗಳ ಕಡೆ ಗಮನ ಹರಿಸದೆ, ಅಸ್ಸಾಂನ ಯುವಜನ, ವಿದ್ಯಾರ್ಥಿಗಳು ವಿದೇಶಿ ನಾಗರೀಕರ ಪ್ರಶ್ನೆಯೇ ಮುಖ್ಯ ಪ್ರಶ್ನೆ ಎಂದು ಭಾವಿಸಿದ್ದಾರೆ. ವಿದೇಶಿ ನಾಗರೀಕರ ಪ್ರಶ್ನೆ ಮುಖ್ಯ ಪ್ರಶ್ನೆಗಳಲ್ಲಿ ಒಂದೆಂಬುದನ್ನು ಯಾರೂ ನಿರಾಕರಿಸುವುದಿಲ್ಲ, ಏಕೆಂದರೆ ಈ ಪ್ರಶ್ನೆ ಪರಿಹಾರವಾಗದಿದ್ದಲ್ಲಿ ದೇಶದ ಐಕ್ಯತೆಗೆ ಭಾರೀ ಧಕ್ಕೆ ಉಂಟಾಗುವುದರಲ್ಲಿ ಸಂದೇಶವಿಲ್ಲ. ಆದರೆ ಅದೇ ಸಮಯದಲ್ಲಿ ಅಸ್ಸಾಂನ ವಿವಿಧ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ, ಸೇತುವೆಗಳನ್ನು ನಿರ್ಮಿಸಿದವರು ಯಾರು? ಮೊಟ್ಟಮೊದಲು ಶಾಲಾ, ಕಾಲೇಜು, ಆಸ್ಪತ್ರೆಗಳನ್ನು ತೆರೆದವರು ಯಾರು? ಬೀಳು ಬಿದ್ದಿದ್ದ ಜಮೀನನ್ನು ಉತ್ತು, ಬಿತ್ತು ಹಸನಗೊಳಿಸಿ ನಗುವಂತೆ ಮಾಡಿದವರು ಯಾರು? ಅಸ್ಸಾಮೇತರ ಜನರ ಈ ಶ್ರಮವನ್ನು ಅಸ್ಸಾಮಿಗಳು ಗುರುತಿಸಬೇಕು.

ಸುಭದ್ರ ಸರಕಾರದ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಶ್ರೀಮತಿ ಗಾಂಧಿಯವರು ಬೆಂಕಿಯ ಜೊತೆಯಲ್ಲಿ ಸರಸವಾಡುತ್ತಿದ್ದಾರೆ. ಆರೆಸ್ಸೆಸ್ ಸಂಘಟನೆಯನ್ನು ಬಹಿರಂಗವಾಗಿ ಟೀಕಿಸುವ ಶ್ರೀಮತಿ ಗಾಂಧಿಯವರು ಅಸ್ಸಾಂನಲ್ಲಿ ಅವರೊಡನೆ ಷಾಮೀಲಾಗಿ, ಚಳುವಳಿಯನ್ನು ನಿಲ್ಲಿಸಲು ತೀವ್ರ ಕ್ರಮ ಕೈಗೊಳ್ಳದೆ ಕಣ್ಣುಮುಚ್ಚಾಲೆ ಆಡುತ್ತಿದ್ದಾರೆ. ಮತ್ತೊಂದು ಕಡೆ ಅವರ ವಾನರ ಸೈನ್ಯ (ಯುವಕ ಕಾಂಗ್ರೆಸ್) ಪ. ಬಂಗಾಳದಲ್ಲಿ ಅಸ್ಸಾಂ ವಿರುದ್ಧ ದಿಗ್ಬಂಧನ ಕಾರ್ಯಕ್ರಮವನ್ನು ಹಾಕುತ್ತಿದ್ದಾರೆ. ದೇಶದ ಸಮರ್ಥ ನಾಯಕಿಗೆ ತನ್ನ ಯುವಕ ಕಾಂಗ್ರೆಸ್‌ನ ಒಂದು ಶಾಖೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲದಂತಾಗಿರುವುದು ಶೋಚನೀಯ.

ಈಗಾಗಲೇ ಪಾಕಿಸ್ತಾನ, ಬಂಗ್ಲಾದೇಶ, ಬರ್ಮಾ ಎಂದು ಛಿದ್ರವಾಗಿರುವ ಭಾರತದ ರಾಷ್ಟ್ರೀಯ ಐಕ್ಯತೆಯ ಹೊಣೆ ವಿದ್ಯಾರ್ಥಿ ಯುವಜನತೆಯ ಮೇಲಿದೆ. ಆರೆಸ್ಸೆಸ್, ಯುವಕ ಕಾಂಗ್ರೆಸ್, ಸಿ. ಐ. ಎ. ಹಾಗೂ ಅಸ್ಸಾಂ ಗಣ ಸಂಗ್ರಾಮ್ ಪರಿಷತ್ ನಂತಹ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಆಂದೋಳನವನ್ನು ಎಬ್ಬಿಸಬೇಕಾಗಿದೆ. ಶಿವಸೇನೆ, ಗುಂಡೂರಾಯರು ಹೇಳುವ "ಮಣ್ಣಿನ ಮಕ್ಕಳು" ವಾದಗಳನ್ನು ಬೂದಿಮಾಡಬೇಕಾಗಿದೆ. ಇದಕ್ಕಾಗಿ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಎಲ್ಲಾ ಎಡ ಹಾಗೂ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ, ಯುವಜನ ಸಂಘಟನೆಗಳು ಸಂಯುಕ್ತ ಕಾರ್ಯಾಚರಣೆಯನ್ನು ಕೂಡಲೇ ರೂಪಿಸಬೇಕಾಗಿದೆ.

●

ಸಂಪಾದಕೀಯ

[ಒಂದನೇ ಪುಟದಿಂದ]

ಎರಡನೇ ಹಂತದ ಕೆಲಸವು ನಡೆಯುತ್ತಾ ಇದೆ. ಜಲವಿದ್ಯುತ್ ಯೋಜನೆಗೆ ಸರಿಯಾದ ಮಳೆ ಅಗತ್ಯ. ಜಲಾಶಯಗಳಲ್ಲಿ ನೀರು ಕಡಿಮೆಯಾದಾಗ ವಿದ್ಯುತ್ ಕೊರತೆಯಾಗುತ್ತದೆ ಇತ್ತೀಚೆಗೆ ಥರ್ಮಲ್ ಯೋಜನೆಯೊಂದನ್ನು ರಾಯಚೂರ್‌ನಲ್ಲಿ ಆರಂಭಿಸಲಾಗಿದೆ. ಅದರ ಕೆಲಸವೂ ನಿಧಾನವಾಗಿ ನಡೆದಿದೆ ನಮ್ಮ ನೆರೆ ರಾಜ್ಯವಾದ ಕೇರಳವು ನಮ್ಮ ಕಷ್ಟಕಾಲದಲ್ಲಿ ನಮ್ಮ ನೆರವಿಗೆ ಬಂದಿದೆ. ಇತರ ರಾಜ್ಯಗಳಿಂದ ಹೆಚ್ಚು ವಿದ್ಯುತ್ ಪಡೆದು ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುವಾಗಲೇ ಇದು ತಾತ್ಕಾಲಿಕ ಪರಿಹಾರವೆಂಬುದನ್ನು ಅರಿತು ದೀರ್ಘಕಾಲದ ಯೋಜನೆ ಮಾಡುವುದಗತ್ಯ. ಅದಕ್ಕೆ ಕಾಳಿನದಿ ಯೋಜನೆಯನ್ನು ಬೇಗ ಮುಗಿಸಬೇಕು ಮಂಗಳೂರಿನಲ್ಲೂ ಥರ್ಮಲ್ ಪ್ಲಾಂಟ್ ಸ್ಥಾಪಿಸಬೇಕು. ನಾಲ್ಕು ಗ್ಯಾಸ್ ಟರ್ಬೈನ್‌ಗಳ ಸ್ಥಾಪನೆಗೆ ತುರ್ತುಕ್ರಮ ತೆಗೆದುಕೊಳ್ಳಬೇಕು ರಾಜ್ಯದ ಅಭಿವೃದ್ಧಿಗೆ ಕೈಗಾರಿಕಾ ಬೆಳವಣಿಗೆಗೆ ವಿದ್ಯುಚ್ಛಕ್ತಿ ಬಹಳ ಅಗತ್ಯ. ದೀರ್ಘ ಕಾಲದ ಯೋಜನೆಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದು ಸರಕಾರದ ಜವಾಬ್ದಾರಿ.

●

ಮುದೂರು ಯುವಕರ ಹೋರಾಟಕ್ಕೆ ಗೆಲುವು

ದ.ಕ. ಜಿಲ್ಲೆ ಕುಂದಾಪುರ ತಾಲ್ಲೂಕಿನ ಮುದೂರು ಗ್ರಾಮದ ಯುವಕ ಮಂಡಲದವರು ರೈತಸಮಿತಿಯ ನೆರವು ಪಡೆದು ಕೃಷಿಕಾರ್ಮಿಕರಿಗೆ ಲಿಂಗಭೇದವಿಲ್ಲದೆ ಕೊಯ್ಲಿನ ಸಮಯದಲ್ಲಿ ತಲಾ ಹತ್ತು ಸೇರು ಭತ್ತ ಕೊಡಬೇಕೆಂದು ಒತ್ತಾಯಿಸಿ ಹೋರಾಡಿದ್ದರು. ಈ ಹಿಂದೆ ಕೃಷಿಕಾರ್ಮಿಕರಿಗೆ ಕಡಿಮೆ ಕೂಲಿ ಕೊಟ್ಟು ಭೂಮಾಲೀಕರು ವಂಚಿಸುತ್ತಿದ್ದರು. ಈ ಹೋರಾಟದಿಂದ ಕೃಷಿ ಕಾರ್ಮಿಕರಿಗೆ ಭತ್ತ ಸಿಕ್ಕಿ, ಯುವಕ ಮಂಡಲದ ಬಗ್ಗೆ ಅವರು ಸದಭಿಪ್ರಾಯ ಬೆಳೆಸಿಕೊಂಡಿದ್ದಾರೆ.

●

ಬೀಡಿ ಕೆಲಸಗಾರರ ಸಭೆ

ಹರಿಹರದ ಕಿರ್ಲೋಸ್ಕರ್ ಬೀಡಿ ಕನ್‌ಸ್ಟ್ರಕ್ಷನ್ ಕೆಲಸಗಾರ ಪ್ರಮುಖರ ಸಭೆ 13-4-80ರಂದು ಸೇರಿತ್ತು. ಸಿ ಐ ಟಿ.ಯು. ಕರೆಯಂತೆ ಏಪ್ರಿಲ್ 21 ರಂದು ಬೆಲೆಏರಿಕೆ ವಿರೋಧಿ ದಿನಾಚರಣೆ ನಡೆಸಲು ತೀರ್ಮಾನಿಸಲಾಯಿತು. ಏಪ್ರಿಲ್ 11ರಂದು ಅಲ್ಲಿನ ಹೋಟೆಲ್ ಕಾರ್ಮಿಕರಮೇಲೆ ಮಾಲೀಕರು ನಡೆಸಿದ ದಬ್ಬಾಳಿಕೆಯನ್ನು ವಿರೋಧಿಸಿ, ದೌರ್ಜನ್ಯವನ್ನು ಖಂಡಿಸಲಾಯಿತು. ಮೇ ತಿಂಗಳ ಮಧ್ಯದಲ್ಲಿ ಹರಿಹರದಲ್ಲಿ ಜರಗಲಿರುವ ಸಿ. ಐ. ಟಿ. ಯು. ರಾಜ್ಯಸಮಿತಿ ಸಭೆಯನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

○

ಕ್ರಾಂತಿ!

[ಒಂದನೇ ಪುಟದಿಂದ]

ಆ ಹುಡುಗ ಗುಡುಗಿದ :

"ಗೋಡೆ! ಮಣ್ಣಿನ ಗೋಡೆ!
ತುಸು ತಟ್ಟಿದರೂ ಬೀಳುವ ಗೋಡೆ!!
"ನಾವೆಲ್ಲ ಒದ್ದು ಕೆಡವಬೇಕಾದ
ಬೀಳಕ ಗೋಡೆ!!"

ಅಂದೇ ಸಂಜೆ ಕೆಂಡದುಂಡೆಗಳೆಲ್ಲವೂ
ಕಜಾನ ನಗರದ ಜೇಲಿನಲ್ಲಿ ಕೂಡಿದ್ದವು.
ಇದೆ ಹುಡುಗನಿಗೆ ಜೊತೆಗಾರನೊಬ್ಬ
ಕೇಳಿದ "ಗೆಳೆಯ ಉಲ್ಯಾನೋವ್
ನೀನು ಮುಂದೆ ಏನು ಮಾಡ
ಬೇಕೆಂದಿರುವೆ?"

ವ್ಲಾದಿಮೀರ್ ಜೇಲು ಜೋಡಿಯವನಿಗೆ
ಹೇಳಿದ : "ಬೀಳಲಿರುವ ಎಲ್ಲ
ಗೋಡೆಗಳ ಕೆಡುವುದು;
ಹೊಸ ಬಡಾವಣೆಗಳಿರುವ
ಊರುಗಳ ಕಟ್ಟುವುದು!"

(ಲೆನಿನ್ 110ನೇ ಹುಟ್ಟುಹಬ್ಬದ ನೆನಪಿಗಾಗಿ)

–ಪ್ರಕಾಶ ಹಿಟ್ಟಿನಹಳ್ಳಿ

●

ಪ್ಲೈಉಡ್ ಕಾರ್ಮಿಕರ ಶೋಷಣೆ

ಧಾರವಾಡದ ಅತ್ತಿಕೊಳ್ಳದಲ್ಲಿರುವ ಇಂಡಿಯನ್ ಪ್ಲೈಉಡ್ ಕಂಪೆನಿಯು ಸುಮಾರು 800 ಕಾರ್ಮಿಕರನ್ನು ಹೊಂದಿದೆ. 20 ವರ್ಷಗಳಿಂದ ಈ ಕಂಪೆನಿಯಲ್ಲಿ ಒಂದೇ ಸಮನೆ ಕಾರ್ಮಿಕರ ಶೋಷಣೆ ನಡೆಯುತ್ತಿದೆ. ಕಾರ್ಮಿಕ ಸಂಘದ ಹೋರಾಟದ ಫಲವಾಗಿ ಕರ್ನಾಟಕ ಸರ್ಕಾರ ಕನಿಷ್ಠ ವೇತನದ ಬಗ್ಗೆ ನೋಟಿಫಿಕೇಶನ್ ಜಾರಿಮಾಡಿತ್ತು. ಆದರೆ ಆಡಳಿತವರ್ಗ ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದು ಕಾರ್ಮಿಕರಿಗೆ ಇದು ಸಿಗದಂತೆ ಮಾಡಿದೆ ಕಾರ್ಮಿಕರ ಹಲವಾರು ಬೇಡಿಕೆಗಳನ್ನು ಆಡಳಿತವರ್ಗ ಈಡೇರಿಸಿಲ್ಲ. ಆದ್ದರಿಂದ ಕಾರ್ಮಿಕರು ಹೋರಾಡಲು ನಿರ್ಧರಿಸಿದ್ದಾರೆ. ಇದಕ್ಕೆ ಸಾರ್ವಜನಿಕರ, ರೈತರ, ವಿದ್ಯಾರ್ಥಿಗಳ ಬೆಂಬಲಕೋರಲಾಗಿದೆ.

○

ಹೋಟೆಲ್ ತಿಂಡಿ ಬೆಲೆಏರಿಕೆ ವಿರೋಧಿಸಿ ಪಿಕೆಟಿಂಗ್

ಕೊಡಗು ಜಿಲ್ಲೆಯ ವೀರಾಜಪೇಟೆಯಲ್ಲಿ ಹೋಟೆಲ್ ಚಹ-ತಿಂಡಿಗಳ ಬೆಲೆಏರಿಕೆಯನ್ನು ವಿರೋಧಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವೀರಾಜಪೇಟೆ ಶಾಖೆಯ ನೇತೃತ್ವದಲ್ಲಿ 9-4-80 ರಿಂದ ಪಿಕೆಟಿಂಗ್ ಪ್ರಾರಂಭಿಸಲಾಯಿತು. ನಗರದ ಎಲ್ಲಾ ಹೋಟೆಲುಗಳ ಮುಂಭಾಗದಲ್ಲಿ ಪಿಕೆಟಿಂಗ್ ನಡೆಯುತ್ತಿದ್ದ ಹಾಗೆ ವೀರಾಜಪೇಟೆ ಡಿ ವೈ ಎಸ್. ಪಿ. ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು ಮಧ್ಯೆ ಪ್ರವೇಶಿಸಿ ಬೆಲೆ ಇಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹೇಳಿ ಪಿಕೆಟಿಂಗ್ ನಿಲ್ಲಿಸಲು ವಿನಂತಿಸಿದರು. ನಂತರ ತಾತ್ಕಾಲಿಕವಾಗಿ ಪಿಕೆಟಿಂಗ್ ನಿಲ್ಲಿಸಲಾಯಿತು.

●

ಅಸ್ಸಾಂ ಬಗ್ಗೆ ಕಿಸಾನ್‌ಸಭೆ ಗೊತ್ತುವಳಿ

ಅಖಿಲಭಾರತ ಕಿಸಾನ್‌ಸಭಾದ ಕೇಂದ್ರ ಸಮಿತಿಯು ಅಸ್ಸಾಂನಲ್ಲಿ ಹೆಚ್ಚುತ್ತಿರುವ ಚಳುವಳಿಯ ಬಗ್ಗೆ ತನ್ನ ತೀವ್ರ ಕಾಳಜಿಯನ್ನು ವ್ಯಕ್ತಪಡಿಸಿದೆ. ಇದರಿಂದ ಆರ್ಥಿಕತೆಗೆ ಧಕ್ಕೆ, ಜನತೆಗೆ ಕಷ್ಟ ಮುಂತಾದವು ಆಗುತ್ತಿದ್ದು, ದೇಶದ ಐಕ್ಯತೆಗೆ ಭಂಗ ಬರುತ್ತಿದೆಯೆಂದು ಕೇಂದ್ರಸಮಿತಿ ಸೂಚಿಸಿದೆ.

ಅಸ್ಸಾಂ ಜನತೆಯ ನಿಜವಾದ ಸಂಕಷ್ಟಗಳನ್ನು ಅನೇಕರು ತಮ್ಮ ಪ್ರತಿಗಾಮಿ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಬ್ರಿಟೀಷರ ದಿನದಿಂದ ಅಸ್ಸಾಂನ ಜನತೆಯ ಭಯ, ಕಷ್ಟಗಳು ಆರಂಭವಾಗಿವೆ. ನಂತರದ ಕೇಂದ್ರ ಸರ್ಕಾರ ಇದನ್ನು ಇನ್ನಷ್ಟು ಹೆಚ್ಚಿಸಿದೆ. ಭೂಮಾಲೀಕರು, ಪಟ್ಟಭದ್ರ ಹಿತಾಸಕ್ತಿಗಳು ಇದನ್ನು ಉಪಯೋಗಿಸಿಕೊಂಡಿವೆ. ಇದನ್ನೆಲ್ಲ ತಡೆಯಲು ಪರಿಹಾರ ಕಂಡುಹಿಡಿಯಬೇಕೆಂದು ಕಿಸಾನ್‌ಸಭಾ ಕೇಂದ್ರಸಮಿತಿ ಒತ್ತಾಯಿಸಿದೆ.

●

ಐಕ್ಯರಂಗ ಓದುಗರ ಮತ್ತು ಏಜೆಂಟರುಗಳ ಗಮನಕ್ಕೆ

ಏಪ್ರಿಲ್ 27 ರಂದು ಮತ್ತು ಮೇ 4 ರಂದು ಪ್ರಕಟವಾಗಬೇಕಾಗಿರುವ ಐಕ್ಯರಂಗವು ಮೇ ವಿಶೇಷಾಂಕವಾಗಿ ಮೇ 4 ರಂದು ಸಂಯುಕ್ತ ಸಂಚಿಕೆಯಾಗಿ ಹೊರಬರಲಿದೆ.

ಈ ಮೊದಲೇ ತಿಳಿಸಿದಂತೆ ಮೇ ತಿಂಗಳ ಮೊದಲ ವಾರದಿಂದ ಬಿಡಿಪ್ರತಿಯ ಬೆಲೆಯನ್ನು 50 ಪೈಸಕ್ಕೆ ಏರಿಸಲಾಗುವುದು. ಓದುಗರು ಮತ್ತು ಏಜೆಂಟರುಗಳು ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಂ. ಕೆ. ಭಟ್
ಸಂಪಾದಕ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT